ಬಹಳಷ್ಟು ತಿದ್ದುಪಡಿಗಳಾಗಿರುವುದರಿಂದ ನ್ಯಾಯಯುತ ಚುನಾವಣೆ ನಡೆಸಲು ಮತ್ತು ಎಲ್ಲಾ ವರ್ಗಗಳಿಗೆ ನ್ಯಾಯ ಒದಗಿಸಲು ಅನುವಾಗುವಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡಬೇಕೆಂದು ಈ ಸದನವು ರಾಜ್ಯ ಚುನಾವಣಾ ಆಯೋಗವನ್ನು ಒತ್ತಾಯಿಸುತ್ತದೆ"

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ.

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ.

ಪ್ರಸ್ತಾವವು ಅಂಗೀಕೃತವಾಗಿದೆ.

ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

9. ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ವಿಷಯ: ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ):– ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಒಂದು ದೊಡ್ಡ ಭೀಕರವಾದಂಥ ಬರಗಾಲವನ್ನು ನಾವೆಲ್ಲರು ಎದುರಿಸುತ್ತಿದ್ದೇವೆ. ಮೊದಲು ಬರಗಾಲ 142 ತಾಲ್ಲೂಕು ಘೋಷಣೆಯಾಗಿ ಈಗ 157 ತಾಲ್ಲೂಕುಗಳಿಗೆ ಬರಗಾಲ ಬಂದಿದೆ.

ಶ್ರೀ ವೆಂಕಟರಾವ್ ನಾಡಗೌಡ:– ಮಾನ್ಯ ಶಿವಕುಮಾರ್‌ರವರೆ, ಇದೂ ಒಂದು ಕಾರಣ ಚುನಾವಣೆ ಮುಂದೆ ಹೋಗುವುದಕ್ಕೆ.

ಶ್ರೀ ಡಿ.ಕೆ. ಶಿವಕುಮಾರ್:– ಬರಗಾಲ ಇದ್ದಾಗ ಚುನಾವಣೆ ಮುಂದಕ್ಕೆ ಹಾಕುವುದಕ್ಕೆ ಸರ್ಕಾರಕ್ಕೆ ಅವಕಾಶ ಇದೆ.

ಶ್ರೀ ವೆಂಕಟರಾವ್ ನಾಡಗೌಡ:– ನಾನು ಸಹ ಅದೇ ವಿಷಯವನ್ನೇ ಹೇಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಅಧ್ಯಕ್ಷರೆ, 157 ತಾಲ್ಲೂಕುಗಳು ಇವತ್ತು ಬರಗಾಲವನ್ನು ಅನುಭವಿಸುತ್ತಿವೆ. ನಾವು ಇವತ್ತು ಈ ನೀರಿನ

ಅಭಾವವನ್ನು ಎದುರಿಸುತ್ತಿದ್ದು, ನಾವು ಫೆಬ್ರವರಿ ತಿಂಗಳ ಮೊದಲನೆಯ ವಾರದಲ್ಲಿದ್ದೇವೆ. ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ, ಜೂನ್ ಇನ್ನು 6 ತಿಂಗಳು ನಾವು ನೀರಿನ ಬವಣೆಯನ್ನು ಎದುರಿಸಬೇಕಾಗಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನೀರಿನ ಸಲುವಾಗಿ ಒಂದು ದೊಡ್ಡ ಚಿಂತನೆ ಆರಂಭವಾಗಿದೆ. ಕನಕಪುರ ತಾಲ್ಲೂಕಿನ ನನ್ನ ಕ್ಷೇತ್ರದಲ್ಲಿ ದಿವಸಕ್ಕೆ 100 ಬೋರ್‌ವೆಲ್‌ಗಳು ಡ್ರೈ ಆಗುತ್ತಿವೆ. ನಾನು with statistics ಮಾತನಾಡುತ್ತಿದ್ದೇನೆ. ಚುನಾವಣೆಯ ಸಲುವಾಗಿ ನಾವು ಈಗ ಹಳ್ಳಿಯಲ್ಲಿದ್ದೇವೆ. ಕಾವೇರಿ ಬೇಸಿನ್ ಇರತಕ್ಕಂಥ ನಮ್ಮ ತಾಲ್ಲೂಕಿನಲ್ಲಿ ಈ ಪರಿಸ್ಥಿತಿ ಆಯಿತು ಎಂದರೆ ಬಹುಶಃ ಕೋಲಾರ ಜಿಲ್ಲೆಯಲ್ಲಿ ಮತ್ತು ಉತ್ತರ ಕರ್ನಾಟಕದ ಪರಿಸ್ಥಿತಿ ಆ ದೇವರೆ ಕಾಪಾಡಬೇಕಾಗಿದೆ. ನಮ್ಮ ಪಕ್ಷದವರು ನನ್ನನ್ನು ಬರಗಾಲ ಜಿಲ್ಲೆಗಳಿಗೆ ಕಳುಹಿಸಿ ಕೊಟ್ಟಿದ್ದರು. 30–40 ತಾಲ್ಲೂಕುಗಳಿಗೆ ನಾನು ಪ್ರವಾಸ ಮಾಡಿ ಬಂದೆ. ನಾನು ಅಲ್ಲಿ ಪರಿಸ್ಥಿತಿ ನೋಡಿ ಅಧ್ಯಯನ ಮಾಡಿ ಬಂದೆ ಅದು ಒಂದು ವಿಚಾರ. ಇವತ್ತು ರೈತರಿಗೆ ಸಂಬಳ ಇಲ್ಲ, ಪೆಷನ್ ಇಲ್ಲ, ಪ್ರಮೋಷನ್ ಇಲ್ಲ, ಅವರಿಗೆ ಲಂಚ ಇಲ್ಲ, retirement ಇಲ್ಲ. ಒಂದು ರೀತಿಯಲ್ಲಿ ರೈತ ಕಷ್ಟವನ್ನು ಅನುಭವಿಸುತ್ತಿದ್ದಾನೆ. ಮುಂದಕ್ಕೆ ಈ ರಾಜ್ಯದಲ್ಲಿಯಾಗಲಿ, ಈ ದೇಶದಲ್ಲಿಯಾಗಲಿ ನನಗೆ ಒಂದು ದೊಡ್ಡ ಭಯ ಕಾಡುತ್ತಿರುವುದು ಎಂದರೆ, ಮುಂದಕ್ಕೆ ಈ ನೀರಿಗೋಸ್ಕರ ಮತ್ತು ವಿದ್ಯುತ್ತಿಗೋಸ್ಕರ ದೇಶದಲ್ಲಿ ಯುದ್ಧವಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಅಂತಹ ಒಂದು ಪರಿಸ್ಥಿತಿ ನಿರ್ಮಾಣ ಆಗುತ್ತಿದೆ. ಹಳ್ಳಿಗಳಲ್ಲಿ ಕೂಡ ಒಂದೊಂದು ಬೋರ್‌ವೆಲ್ ಇರುವ ಕಡೆ ಯಾವುದಾದರೂ ಒಬ್ಬ ರೈತನ ಜಮೀನಿನಲ್ಲಿ ನೀರು ಇದ್ದರೆ ಸುಮಾರು ಜನರು ಹಿಂಡು ಹಿಂಡಾಗಿ ರಾತ್ರಿ ಹೊತ್ತು ಹೋಗಿ ಅವರಿಂದ ತಪ್ಪಿಸಿಕೊಂಡು ನೀರು ತೆಗೆದುಕೊಂಡು ಬರುವಂಥದ್ದು ಕೂಡ ನಡೆಯುತ್ತಿದೆ. ಹಳ್ಳಿಗಳಲ್ಲಿ ಅನೇಕ ಕಡೆ ಈ

ನೀರಿಗಾಗಿ ಗಲಾಟೆಗಳು ಆಗುವುದಕ್ಕೆ ಕಾರಣವಾಗುತ್ತಿವೆ. ಹೆಣ್ಣುಮಕ್ಕಳಲ್ಲಿ ನೀರಿಗಾಗಿ ಗಲಾಟೆ ಆಗುತ್ತಿದೆ. ಇವತ್ತು ಕರ್ನಾಟಕ ಸರ್ಕಾರ ವಿದ್ಯುಚ್ಛಕ್ತಿ ಇಲಾಖೆ ನನ್ನ ಕ್ಷೇತ್ರದಲ್ಲಿ ಏನಾಗುತ್ತಿದೆ ಎಂದರೆ, ರೈತರು ಕೆಲವರು ಪಂಚಾಯಿತಿ ಟ್ಯಾಂಕರ್‌ಗಳಿಗೆ ನೀರನ್ನು ಕೊಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ರೈತರ ಹತ್ತಿರ ನೀರು ಇದೆ. ಕೆಲವು ಪ್ರೈವೇಟ್ ಟ್ಯಾಂಕರ್‌ಗಳಲ್ಲಿ ಹೋಗಿ ನೀರನ್ನು ತೆಗೆದುಕೊಂಡು ಬರುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಇಲಾಖೆಯವರು 4 ಕೇಸ್‌ನ್ನು ಕಮರ್ಷಿಯಲ್‌ಗೆ ನೀರನ್ನು ಯೂಸ್ ಮಾಡುತ್ತಿದ್ದೀರೆಂದು ಮತ್ತು ಮಾರಾಟ ಮಾಡುತ್ತಿದ್ದೀರೆಂದು ರೈತರ ಮೇಲೆ ಇವತ್ತು ನನ್ನ ತಾಲ್ಲೂಕಿನಲ್ಲಿ ಅರೆಕಡ್ಡಿ ಮತ್ತು ಕಪಾಳ ಎನ್ನುವ ಗ್ರಾಮದವರ ಮೇಲೆ ಕೇಸ್ ಹಾಕಿದ್ದಾರೆ. ಪಂಚಾಯತಿಗೆ ನೀರನ್ನು ಕೊಡುವುದರ ಸಲುವಾಗಿ ಈ ರೈತರುಗಳ ಮೇಲೆ ಕೇಸ್ ಹಾಕುತ್ತಿದ್ದಾರೆ. ಈಗ ಯಾವ ರೈತರಿಂದ ನೀರು ಕೊಡುವುದಕ್ಕೆ ಆಗುತ್ತಿಲ್ಲ. ನಾನು ಜಿಲ್ಲಾಧಿಕಾರಿಗಳನ್ನು ಕೇಳಿಕೊಂಡೆ, ಜಿಲ್ಲಾಧಿಕಾರಿಗಳ ಫಂಡಿನಲ್ಲಿ ದುಡ್ಡು ಇದೆ. ಒಂದೊಂದು ಪಂಚಾಯತಿಗೆ ಒಂದೊಂದು ಟ್ಯಾಂಕರನ್ನಾದರೂ ಕೊಡಿಸಿ ಅದಕ್ಕೆ ಒಂದೂವರೆ ಲಕ್ಷ ರೂ.ಗಳಾಗುತ್ತದೆ. ಟ್ಯಾಂಕರ್ ಒದಗಿಸಿ ಕೊಟ್ಟರೆ ನೀರನ್ನು ಒದಗಿಸಿಕೊಳ್ಳುವುದಕ್ಕೆ ಆಗುತ್ತದೆಂದರೆ ಅದಕ್ಕೆ ನಮಗೆ ಪ್ರಾವಿಷನ್ ಇಲ್ಲವೆಂದು ಹೇಳುತ್ತಾರೆ. ಬೋರ್‌ವೆಲ್‌ಗಳನ್ನು ಕೊಡುವುದಕ್ಕೆ ಸ್ವಲ್ಪ ಹಣವನ್ನು ಕೊಟ್ಟಿದ್ದರು. ಅದಕ್ಕೆ ಪಂಪ್‌ಸೆಟ್ಟು ಮತ್ತು ಮೋಟರ್‌ನ್ನು ಕೊಡಿಸಬೇಕೆಂದರೆ ಅದು ಪಂಚಾಯತಿಗೆ ಹೋಗಬೇಕು. ಪಂಚಾಯತಿಯವರ ಹತ್ತಿರ ಹಣ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಾನು ಬೇರೆ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಮೂಲಭೂತವಾಗಿ ನೀರಿನ ಏನು ಬವಣೆ ಇದೆ ಇದನ್ನು ನಿಭಾಯಿಸಲಿಕ್ಕೆ ಸರ್ಕಾರಕ್ಕೆ ಕಣ್ಣು ಇಲ್ಲವೆನ್ನುವುದಾದರೆ, ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳನ್ನು ಅವರು ಕೆಣಕುತ್ತಿದ್ದರು. ಅವರಿಗೆ ಕೋಪ

ಬರುವಂತೆ ಮಾಡುತ್ತಿದ್ದರು ಅವರು ಏನಾದರೊಂದು ಉತ್ತರವನ್ನು ಹೇಳಲಿ ಎಂದು ಮಾತನಾಡುತ್ತಿದ್ದರು. ಈ ಸರ್ಕಾರಕ್ಕೆ ಕಿವಿ ಇಲ್ಲ, ಕಣ್ಣು ಇಲ್ಲ ಎನ್ನುವ ತರಹ ಕಾಣುತ್ತಿದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇವತ್ತು ಈ ರಾಜ್ಯದ ಈ ಬರಗಾಲದಲ್ಲಿ ಯಾರು ಹಳ್ಳಿಯ ಜನ ನಗರದ ಜನ ಈ ನೀರಿಗೋಸ್ಕರ ತತ್ತರಿಸುತ್ತಿದ್ದಾರೆ ಇವರ ಬಗ್ಗೆ ತಾವು ಚಿಂತನೆ ಮಾಡಬೇಕು. ಕೆಲವು ಕಡೆ 1000, 1200, 1500 ಅಡಿ ನೀರು ಆಳಕ್ಕೆ ಹೋಗಿದೆ. ಇದರಿಂದ ಫ್ಲೋರೈಡ್ ಅಂಶ ಬರುತ್ತಿದೆ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಆದ್ದರಿಂದ ಇವತ್ತು ಕುಡಿಯುವ ನೀರಿಗೆ 2 ಕೋಟಿ ರೂ.ಗಳನ್ನು ಕೊಡುವುದರಿಂದ ಏನು ಮಾಡುವುದಕ್ಕಾಗುವುದಿಲ್ಲ. ಒಂದು ಬೋರ್‌ವೆಲ್‌ಗೆ ಒಂದು ಲಕ್ಷ ರೂ.ಗಳು ಬೇಕಾಗುತ್ತದೆ. ಅವನಿಗೆ ಮೋಟಾರ್ ಎಲ್ಲಾ ಸೇರಿ 3–4 ಲಕ್ಷ ರೂ.ಗಳು ಬೇಕಾಗುತ್ತದೆ. ಹೇಗೆ ಇದನ್ನು ನಾವು ಸಹಾಯ ಮಾಡುವಂಥದ್ದು. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈ ನೀರಿನ ವಿಚಾರದಲ್ಲಿ ಬೇರೆ ಕಾರ್ಯಕ್ರಮವನ್ನು ನಿಲ್ಲಿಸಿ, ಸಬ್ಸಿಡಿ ಕೊಡುವುದು ಬೇರೆ ಕೊಡುವುದು ರೋಡಿನ ವಿಚಾರ ಇರಬಹುದು ಎಲ್ಲವನ್ನು ಕೂಡ ನಿಲ್ಲಿಸಿ ಒಂದೊಂದು ಕ್ಷೇತ್ರಕ್ಕೆ ಮುಂದಿನ 5 ವರ್ಷಕ್ಕೆ ಈ ಸರ್ಕಾರ ಏನು ಪ್ಲಾನ್ ಮಾಡಿದೆ. ಮುಂದಿನ ಇಂತಹ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ಈ ನೀರಿನ ಬವಣೆಯನ್ನು ಎದುರಿಸಲು ಈ ಬರಗಾಲವನ್ನು ಎದುರಿಸಲು ಈ ಸರ್ಕಾರದ ಪ್ಲಾನ್ ಏನು? ನೀವು ನಿನ್ನೆ ದಿವಸ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿಸಿದ್ದೀರೆಂದರೆ, ನಾವು 25 ಸಾವಿರ ರೂ.ಗಳನ್ನು ಕೊಟ್ಟಿದ್ದೇವೆ, 3600 ಕೋಟಿ ರೂ.ಗಳನ್ನು ಕೊಟ್ಟು 15 ಲಕ್ಷ ಜನ ರೈತರಿಗೆ ಸಹಾಯ ಮಾಡಿದ್ದೇವೆಂದು ಹೇಳಿಸಿರುತ್ತೀರಿ. ಒಟ್ಟು ಒಂದು ಕೋಟಿ ಜನ ರೈತರು ಇದ್ದಾರೆ, ಬರೀ 15 ಲಕ್ಷ ಜನ ರೈತರಿಗೆ ಸಹಾಯ ಮಾಡಿದ್ದೇವೆಂದು ಹೇಳಿದ್ದಾರೆ. ಆಮೇಲೆ ಒಬ್ಬೊಬ್ಬರಿಗೆ ಒಂದೊಂದು ಸಾವಿರ ಮತ್ತು 200 ರೂ.ಗಳನ್ನು ಸರ್ಕಾರದವರು ಕೊಟ್ಟರು. ಅದಕ್ಕೆ ಒಂದು ಸಣ್ಣ ಅಭಿನಂದನೆಯನ್ನು ತಿಳಿಸೋಣ. ಆದರೆ ಟ್ಯಾಂಕರ್‌ಗಳಿಂದ ಈ ನೀರಿನ

ಬವಣೆಯನ್ನು ನಿಭಾಯಿಸಲು ಯೋಚನೆಗಳನ್ನು ಮಾಡಿ ಟ್ಯಾಂಕರ್‌ಗಳು ಮತ್ತು ಈ ಕೊಳವೆಬಾವಿಗಳ ಮೂಲಕ ಕುಡಿಯುವ ನೀರನ್ನು ಮತ್ತು ಗೋಶಾಲೆಗಳ ಮೂಲಕ ಜಾನುವಾರುಗಳಿಗೆ ಮೇವನ್ನು ಒದಗಿಸಲು ತುರ್ತಾಗಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಮಾನ್ಯ ರಾಜ್ಯಪಾಲರಿಂದ ಈ ಒಂದು ಸುಳ್ಳನ್ನು ಹೇಳಿಸಿರುತ್ತೀರಿ ಇದು ಸರಿಯಲ್ಲ. ಇದು ವಾಸ್ತವಾಂಶಕ್ಕೆ ಮತ್ತು ಸತ್ಯಕ್ಕೆ ಬಹಳ ದೂರ ಇದೆ. ಸ್ವಲ್ಪ ಹಣ ಇರಬಹುದು, ಇವತ್ತು ನೀರಿನ ಸಲುವಾಗಿ ಏನು ಹಣ ಇಟ್ಟಿರುತ್ತೀರಿ, ಈ ಹಣ ಸಾಲದು. ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡು ಕನಿಷ್ಟ ಒಂದು ಕ್ಷೇತ್ರಕ್ಕೆ ವಿಶೇಷವಾಗಿ ಬರಿ ನೀರಿಗಾಗಿ ಒಂದೊಂದು ಕಡೆ 5 ಕೋಟಿ ರೂ.ಗಳನ್ನು ಇಡಬೇಕಾಗುತ್ತದೆ. ನಾನು ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಗಮನಿಸಿದ್ದೇನೆ. ಇವತ್ತು ರೈತ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳ ಭಾಗದಲ್ಲಿ ಬಾಗಲಕೋಟೆಗೆ ಹೋಗಿದ್ದೆ, ರೈತ ಕೋಟ್ಯಾಂತರ ರೂ.ಗಳನ್ನು ಬೆಳೆ insurance ಕಟ್ಟಿರುತ್ತಾನೆ. ಒಂದು ಉದಾಹರಣೆ, ಬಾಗಲಕೋಟೆಗೆ ಹೋದರೆ ಅಲ್ಲಿಯ ಜಿಲ್ಲಾಧಿಕಾರಿಗಳು ನನಗೆ ಒಂದು ರೆಕಾರ್ಡ್‌ನ್ನು ಕೊಟ್ಟರು. ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ಒಂದು ಪ್ರತಿಯನ್ನು ತರಿಸಿ ಕೊಟ್ಟಿದ್ದರು. 2010–11 ರಲ್ಲಿ 10.39 ಲಕ್ಷ ರೂ.ಗಳನ್ನು 11 ಲಕ್ಷ ಜನ ರೈತರಿಂದ ಹಣ ಕಟ್ಟಿಸಿಕೊಂಡಿದ್ದಾರೆ. 2011–12 ರಲ್ಲಿ 165 ಲಕ್ಷ ರೂ.ಗಳನ್ನು 1,25,770 ರೈತರಿಂದ ಕಟ್ಟಿಸಿಕೊಂಡಿದ್ದಾರೆ. ಆದರೆ ಅವರಿಗೆ insurance ಬಂದಿರುವುದು ಎಷ್ಟು ಎಂದರೆ, 23.41 ಲಕ್ಷ ರೂ.ಗಳು ಬಂದಿದೆ. 960 ಜನ ರೈತರಿಗೆ ಬಂದಿದೆ. ಬಾಕಿ 133 ಕೋಟಿ ರೂ.ಗಳಷ್ಟು ಹಣ ಆ ರೈತರಿಗೆ ಅವರು ಕೊಡಬೇಕಾಗುತ್ತದೆ. ನಾನು ತಮ್ಮ ಮೂಲಕ ಈ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈ insurance ಕಂಪನಿಗಳಿಂದ ಒಂದು ದೊಡ್ಡ ದಂಧೆ ನಡೆಯುತ್ತಿದೆ. ಯಾವ ರೈತರಿಗೆ ಇಂತಹ ಬರಗಾಲದಲ್ಲಿ ಇವತ್ತು 157 ತಾಲ್ಲೂಕುಗಳಲ್ಲಿ ಇಷ್ಟು ಬ್ಯಾಂಕ್‌ಗಳಲ್ಲಿ ಸೊಸೈಟಿ ಲೋನ್ ತೆಗೆಸಿಕೊಂಡು insurance ಕಟ್ಟಿಸಿಕೊಂಡಿದ್ದಾರೆ. ಎಷ್ಟು ಜನ

ರೈತರಿಗೆ ಇವರು ವಾಪಸ್ಸು ಹಣವನ್ನು ಕೊಟ್ಟಿದ್ದಾರೆ. ಇಂತಹ ಬರಗಾಲದಲ್ಲಿ ಅವರಿಗೆ ದುಡ್ಡನ್ನು ಕೊಡಲಿಲ್ಲವೆಂದರೆ, ಈ ಸರ್ಕಾರ ಏನು ಮಾಡುತ್ತಿದೆ. ಎಷ್ಟು ಮೀಟಿಂಗನ್ನು ಸರ್ಕಾರ ಮಾಡಿದೆ. ರೈತರಿಗೆ ಸಹಾಯ ಮಾಡುವುದಕ್ಕೆ ಮತ್ತು ನ್ಯಾಯವನ್ನು ಒದಗಿಸಿ ಕೊಡಲಿಕ್ಕೆ ಏನಾದರೂ ಒಂದು ಕ್ರಮವನ್ನು ಕೈಗೊಂಡಿದೆಯಾ? ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ. ಈ ಬೆಳೆ ವಿಮೆ ವಿಚಾರದಲ್ಲಿ ರೈತರಿಗೆ ಈ ಒಂದು ಬರಗಾಲದಲ್ಲಿ ತಾಲ್ಲೂಕುವಾರು, ಹೋಬಳಿವಾರು ಮನೆಗಳು ಬೀಳುವಂಥದ್ದು ಏನು ಒಂದು ಲೆಕ್ಕಾಚಾರವನ್ನು ಇಟ್ಟೀದ್ದೀರಿ ಇದು ಸರಿಂಯಿಲ್ಲ. ರಾಷ್ಟ್ರ ಮಟ್ಟದಲ್ಲಿಯಾಗಲಿ, ರಾಜ್ಯ ಮಟ್ಟದಲ್ಲಿಯಾಗಲಿ ಈ ಒಂದು ವಿಚಾರದಲ್ಲಿ ವ್ಯಾಪಕವಾದ ಒಂದು ಚಿಂತನೆ ಮಾಡುವುದು ಈ ಒಂದು ಸಂದರ್ಭದಲ್ಲಿ ಬಹಳ ಅವಶ್ಯಕತೆ ಇದೆ. ಇವತ್ತು ಗಾಡಿಗಳಿಗೆ ಮತ್ತು ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ವೈಯಕ್ತಿಕವಾಗಿ ಯಾವ ರೀತಿಯಾಗಿ insurance ಮಾಡಿಸುತ್ತೇವೆಯೋ ಆ ರೀತಿ ಪ್ರತಿಯೊಬ್ಬ ರೈತನಿಗೂ ಅವನ ಜಮೀನಿನ ಮೇಲೆ ಅವನ ಬೆಳೆ ವಿಮೆಯನ್ನು ಮಾಡುವುದಕ್ಕೆ ಈ ಸಂದರ್ಭದಲ್ಲಿ ಒಂದು ತೀರ್ಮಾನವನ್ನು ಮಾಡಬೇಕಾಗುತ್ತದೆ. ಮಳೆ ವಿಚಾರದಲ್ಲಿಯೂ ಕೂಡ ಒಂದು ಪಂಚಾಯತಿ ಮಟ್ಟದಲ್ಲಿ ಏನು ಒಂದು ಮೀಟರ್‌ನ್ನು ಅಳವಡಿಸುವುದಕ್ಕೆ ತೀರ್ಮಾನ ಮಾಡಿ ಎಷ್ಟು ಮಳೆ ಬೀಳುತ್ತದೆ ಎನ್ನುವುದರ ಬಗ್ಗೆ ತೀರ್ಮಾನ ಮಾಡಿದರೆ, ಆ ರೈತರಿಗೆ ಸಹಾಯ ಮಾಡುವುದಕ್ಕೆ ಒಂದು ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಕರ್ನಾಟಕ ಸರ್ಕಾರ ಮೊದಲನೆಯದಾಗಿ ಈ ಒಂದು ವಿಚಾರದಲ್ಲಿ ರೈತನಿಗೆ insurance ಮಾಡಿಸುವ ವಿಚಾರದಲ್ಲಿ ಒಂದು ಹೊಸ ನೀತಿಯನ್ನು ತರಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ರೈತ ಏನು ಬೆಳೆ ವಿಮೆ ಕಟ್ಟುತ್ತಿದ್ದಾನೆ, ಅದು ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಇರಬಹುದು ಅಥವಾ ಬೇರೆ nationalized bank ನಲ್ಲಿ ಇರಬಹುದು. ಎಲ್ಲಾ ಕಡೆಗಳಿಂದ ರೈತರಿಗೆ ಆಗುತ್ತಿರುವ ಮೋಸವನ್ನು ತಪ್ಪಿಸಿ ರೈತರಿಗೆ ನ್ಯಾಯ ಒದಗಿಸಿಕೊಡಬೇಕು.

ಈ insurance company ಗಳೆಲ್ಲಾ ಪಾಲಿಸಿ ಹಣವನ್ನು ತೆಗೆದುಕೊಂಡು ರೈತರಿಗೆ ಏನು ಮೋಸ ಮಾಡುತ್ತಿದ್ದಾರೆ, ಇದರ ಬಗ್ಗೆ ಶಿಸ್ತಿನ ಕ್ರಮವನ್ನು, ಕಾನೂನಿನ ಕ್ರಮವನ್ನು ತೆಗೆದುಕೊಂಡು insurance agency, company ಗಳನ್ನು ಮೊದಲು ಬಂಧಿಸುವಂತಹ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ರೈತರ ಬಗ್ಗೆ insurance company ಗಳು ಹಗಲು ದರೋಡೆ ಮಾಡುತ್ತಿವೆ. ಬೆಳೆ ವಿಮೆ ವಿಚಾರವಾಗಿ, ಹೊಸದಾಗಿ ಪಾಲಿಸಿ ಮಾಡಿ ರೈತರ ರಕ್ಷಣೆಗೆ ಹೋಗಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದಂತಹ ವಿಚಾರ, ನಮ್ಮ ಪಶುಸಂಗೋಪನಾ ಇಲಾಖೆಯ ಸಚಿವರು ಇಲ್ಲಿ ಇಲ್ಲ. ಅವರು ಕೆಲವೊಂದು ಕಡೆ ಗೋಶಾಲೆ ಮಾಡುತ್ತೇವೆಂದು ಒಂದಷ್ಟು ಪ್ರಯತ್ನ ಮಾಡಿದರು. ಇದು ಬಹಳ fail ಆಗಿದೆ. ಕೆಲವು ತಹಶೀಲ್ದಾರರಿಗೆ ತಾವು ಆಂಧ್ರದಿಂದ ತೆಗೆದುಕೊಂಡು ಬನ್ನಿ, ಅಲ್ಲಿಂದ ತೆಗೆದುಕೊಂಡು ಬನ್ನಿ, ಲಾರಿಗೆ ದುಡ್ಡು ಕೊಡುತ್ತೇವೆಂದು ಇಂತಿಷ್ಟು ಹಣ ಎಂದು fix ಮಾಡಿದ್ದಾರೆ. ಇವೆಲ್ಲಾ ಬೋಗಸ್. ಕೆಲವು Village Accountants ಗೆ, ಕೆಲವು officers ಗೆ ಬಿಲ್ ಬರೆದುಕೊಳ್ಳುವುದಕ್ಕೆ ಮಾತ್ರ ಇದು ಅವಕಾಶವಿದೆ ಹೊರತು, ರೈತರಿಗೆ ಇದರಿಂದ ಯಾವುದೇ ರೀತಿಯ ಸಹಾಯ ಕೂಡ ಇಲ್ಲ. ಅದಕ್ಕೆ ನನ್ನದೊಂದು ಸಲಹೆ ಏನೆಂದರೆ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಕೆಲವು ರೈತರುಗಳನ್ನು ಗುರುತಿಸಿ ಅವರಿಗೇ ಈ ಹುಲ್ಲನ್ನು ಬೆಳೆಯುವುದಕ್ಕೆ ಪ್ರೋತ್ಸಾಹಿಸಿ, 3 ವಾರ, 4 ವಾರ, 5 ವಾರದ ಹುಲ್ಲನ್ನು ಬೆಳೆಯುವುದಕ್ಕೆ ಬೇಕಾದಷ್ಟು ಬಿತ್ತನೆಗಳು ನಮ್ಮ ಕೃಷಿ ಇಲಾಖೆಯಿಂದ ಆಗಿದೆ. ಅಲ್ಲಿ ನೀವು ಕನಿಷ್ಟ 100 ಜನ ರೈತರನ್ನು ಗುರುತಿಸಿ ಅವರಿಗೆ ಒಂದು ಎಕರೆಗೆ ಇಂತಿಷ್ಟು ದುಡ್ಡು ಎಂದು fix ಮಾಡಿ, ನಾನು ಲೆಕ್ಕ ಹಾಕಿದ್ದೇನೆ, transportation ದುಡ್ಡು, ಆ ದುಡ್ಡು ಲೆಕ್ಕ ಹಾಕಿದರೆ double ಹಣ ಸಿಗುತ್ತದೆ. ರೈತರಿಗೆ ಯಾರಿಗೆ ನೀರಾವರಿ ಸೌಲಭ್ಯ ಇದೆ, ಅವರ ಹತ್ತಿರ ಮಾತನಾಡಿ ಅವರಿಗೆ

ಬೀಜ ಕೊಟ್ಟು, ಅವರ ಹತ್ತಿರ ಖರೀದಿ ಮಾಡಿ ಅಲ್ಲೇ ಕೊಟ್ಟರೆ ಬಹುಶಃ ಈ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):– ಈಗಾಗಲೇ ಒಂದು ಸ್ಕೀಮ್ ಇದೆ. Already scheme is there. ಅವರೇ buy ಮಾಡಿದರೆ ಅವರಿಗೆ ಪೇಮೆಂಟ್ ಮಾಡುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್:– ನಮ್ಮ ಕ್ಷೇತ್ರದಲ್ಲಿ ನಾನು ಮಾತನಾಡಿದ್ದೇನೆ. ನಮ್ಮಲ್ಲಿ ಯಾವುದೂ ಇಲ್ಲ. ಏನಿದ್ದರೂ ನೀವು ಹೊರಗಡೆಯಿಂದ ತೆಗೆದುಕೊಂಡು ಬನ್ನಿ ದುಡ್ಡು ಕೊಡುತ್ತೇವೆ ಎಂದು ಹೇಳುತ್ತಾರೆ. You come out with a proper policy. ನೀವು ತಿಳುವಳಿಕೆ ಕೊಡಿ, education ಕೊಡಿ. ಒಂದು ತಾಲ್ಲೂಕಿನಲ್ಲಿ 100–200 ಜನ ರೈತರನ್ನು select ಮಾಡಿ. ಬರೀ ಮೇವನ್ನು ಬೆಳೆಯಲಿ. ಆ ಪಾಲಿಸಿ ತಂದರೆ I welcome, I congratulate you. ಒಳ್ಳೆಯ ಕೆಲಸ ಮಾಡಿ. ದಯವಿಟ್ಟು ಮಾಡಿ. ಇವತ್ತಿನಿಂದ ನೀವು plan ಮಾಡಬೇಕು. ಮೇ ತಿಂಗಳಿನಲ್ಲಿ plan ಮಾಡುವುದಲ್ಲ. ನಾವೆಲ್ಲಾ ಎಲೆಕ್ಷನ್ ಜಂಜಾಟದಲ್ಲಿರುತ್ತೇವೆ. ಈಗಿನಿಂದಲೇ plan ಮಾಡಬೇಕು. ರೈತರನ್ನು identify ಮಾಡಿ. ಬಿತ್ತನೆ ಬೀಜ ಕೊಡಿ. ಎಷ್ಟು ಟನ್ ಬೆಳೆಯಬಹುದು? 6–7 ಟನ್ ಬೆಳೆಯಬಹುದು, 10 ಟನ್ ಬೆಳೆಯಬಹುದು, 20 ಟನ್ ಬೆಳೆಯಬಹುದು, ಅವರಿಗೆ ಇಂತಿಷ್ಟು ಬೆಲೆ ಸಿಗುತ್ತದೆ ಎಂದು ತೀರ್ಮಾನ ಮಾಡಲಿ. ಈಗಿನಿಂದಲೇ ನೀವು plan ready ಮಾಡಿಕೊಳ್ಳಿ. ಹುಲ್ಲು ಏನೂ ಲಾಸ್ ಆಗುವುದಿಲ್ಲವಲ್ಲಾ, ಏನಾದರೂ ಹುಲ್ಲು ಉಳಿಯುತ್ತದಲ್ಲಾ, ದಯವಿಟ್ಟು ಅದಕ್ಕೋಸ್ಕರ ತಮ್ಮ ಇಲಾಖೆ ಹಾಗೂ ಪಶುಸಂಗೋಪನಾ ಇಲಾಖೆಯವರು ಇದರ ಬಗ್ಗೆ ಒಂದು plan ಮಾಡಿ ಒಂದು ಕ್ರಾಂತಿಕಾರಕ ಬದಲಾವಣೆ ತರುವಂತಹ ಅವಕಾಶವಿದೆ. ಏಕೆಂದರೆ ಕಳೆದ ಬಾರಿ ಕೃಷಿ ಬಜೆಟ್‌ನ ಬಗ್ಗೆ ಮಾತನಾಡಬೇಕಾದರೆ ತಾವು ಮೊದಲು ಏನು ಹೇಳುತ್ತೀರೆಂದರೆ, 'ಅನ್ನವ ಕೊಟ್ಟ ಹೊಲಕೆ ನಮಿಸಿ, ಚಿನ್ನವ ಸುರಿದ ನೆಲಕೆ ನಮಿಸಿ, ಅನ್ನದಾತ ರೈತನನ್ನು ಸ್ಮರಿಸಿ', ಎನ್ನುವುದು ಎಲ್ಲಿಯೂ ಕಾಣುತ್ತಿಲ್ಲ.

ಬಜೆಟ್‌ನಲ್ಲಿ ಏನೋ ಪ್ರಯತ್ನ ಮಾಡಿದರೂ ಕೂಡ ಇದನ್ನು ಮುಟ್ಟುವುದಕ್ಕೆ ಆಗುತ್ತಿಲ್ಲ. ಇನ್ನೊಂದು ಕಡೆ ಏನು ಹೇಳಿದಿರೆಂದರೆ, 'ಭೂಮಿಯೇ ದೈವ, ಭೂಮಿಯೇ ತಾಯಿ, ಊಳುಮೆಯೇ ಅರ್ಚನೆ, ಬೆಳೆಯಾರೈಕೆ ಮಂತ್ರ, ಸುಗ್ಗಿ ಫಲವೇ ದೇವರು ಕೊಟ್ಟ ವರ.' ಇವೆಲ್ಲಾ ಸುಮ್ಮನೆ ಸದಾನಂದಗೌಡರದ್ದು ಮಾತಾಗಿ ಉಳಿದುಕೊಂಡಿದೆ. ಸರ್ಕಾರವು ಇದನ್ನು ಕಾರ್ಯರೂಪಕ್ಕೆ ತರಬೇಕು. ಇಲ್ಲಿ ಮುಖ್ಯವಾದ ವಿಚಾರವೆಂದರೆ, ಬೆಳೆ ವಿಮೆ. ಬೆಳೆ ವಿಮೆ ಬಗ್ಗೆ ಪಂಚಾಯಿತಿ ಮಟ್ಟದಲ್ಲಿ ಮಳೆ ಬೀಳುವ ವಿಚಾರದಲ್ಲಿ ತೀರ್ಮಾನ ಮಾಡಬೇಕು. ಡಿ.ಸಿ.ಸಿ. ಬ್ಯಾಂಕ್‌ಗೆ ಏನು ಹಣವನ್ನು ಕಟ್ಟುತ್ತಿದ್ದಾರೆ, ಡಿ.ಸಿ.ಸಿ. ಬ್ಯಾಂಕ್, insurance company ಯವರು ಯಾರೂ ಮಾತನಾಡುತ್ತಿಲ್ಲ. ಕೇವಲ ಹಣವನ್ನು ಕಟ್ಟಿಸಿಕೊಂಡು, ಸಾಲವನ್ನು ಕಟ್ಟಿಸಿಕೊಂಡು, ಎರಡು ವರ್ಷ ಬರಗಾಲ ಇತ್ತಲ್ಲಾ, ಎಷ್ಟು ಹಣವನ್ನು ವಾಪಸ್ಸು ಕೊಟ್ಟಿದ್ದಾರೆ? ಹಿಂದೆ ಬೆಳಗಾಂ ಜಿಲ್ಲೆಯಲ್ಲಿ ಸ್ವಲ್ಪ ನೀರಾವರಿ ಇರಬಹುದು, ಅಕ್ಕಪಕ್ಕ ಜಿಲ್ಲೆಯಲ್ಲಿ ನೀವು ಹೋಲಿಕೆ ಮಾಡುವುದಾದರೆ, insurance company ಯವರು ಯಾರೂ ಕೂಡ ಇಂತಹ ರೈತರಿಗೆ ಸಹಾಯ ಮಾಡುವುದಕ್ಕೆ ಹೋಗಿಲ್ಲ. ಹಣವನ್ನೇ ಬಿಡುಗಡೆ ಮಾಡಿಲ್ಲ. ಯಾರೋ ಎಂ.ಡಿ.ಯವರಿಗೆ adjust ಮಾಡಿಕೊಂಡು ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದ್ದಾರೆ. ಆದ್ದರಿಂದ ನೇರವಾಗಿ, ಈ live stocks ಗೆ, ಮನುಷ್ಯರಿಗೆ ಮನೆಗಳ ಮೇಲೆ ಹೇಗೆ individual scheme ಗಳನ್ನು ರೂಪಿಸುತ್ತಾರೆ, ಅದೇ ರೀತಿ ಪ್ರತಿಯೊಬ್ಬ ರೈತರಿಗೆ ನೇರವಾಗಿ ಸಹಾಯ ಮಾಡುವುದಕ್ಕೆ you come out with a new policy. ಈ ಬಜೆಟ್‌ನಲ್ಲಿ ನೀವು ಒಂದು ಪಾಲಿಸಿಯನ್ನು ಘೋಷಣೆ ಮಾಡಿ, ಆಗುತ್ತದೆ ಏಕೆಂದರೆ, ನೀವು ಬೇಕಾದಷ್ಟು Agricultural Policy ತರುತ್ತಿದ್ದೀರಿ, ಪ್ರತಿಯೊಬ್ಬರಿಗೂ minimum price ಸಿಗಬೇಕೆನ್ನುವ ದೃಷ್ಟಿಯಿಂದ ಹೊರಗಡೆಯವರಿಗೆ ತಾವು ಆಹ್ವಾನ ಮಾಡುತ್ತಿದ್ದೀರಿ. ಬೇಕಾದಷ್ಟು ಒಳ್ಳೆಯ ಸ್ಕೀಮ್‌ಗಳು ಇವೆ. A-B, B-C, buy back schame ಇದೆ. ಅದೇ ರೀತಿ ಯಾವ ಪ್ರತಿಯೊಬ್ಬ ರೈತ ಕಳೆದುಕೊಳ್ಳುತ್ತಾನೆ, ಯಾವ ರೈತ ಸರಿಯಾಗಿ

ವ್ಯವಸಾಯ ಮಾಡುತ್ತಾನೆ, ಅವನು ಎಲ್ಲಿ fail ಆಗುತ್ತಾನೆ, ಅವರಿಗೆ ವಿಶೇಷವಾಗಿ ನೀರಿನ ವಿಚಾರದಲ್ಲಿ, ಮಳೆ ವಿಚಾರದಲ್ಲಿ, ಅವರಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಒಂದು bridge ಆಗಿ ನಿಂತುಕೊಳ್ಳಬೇಕಾಗುತ್ತದೆ. ಸರ್ಕಾರ bridge ಆಗಿ ನಿಂತುಕೊಳ್ಳಲಿಲ್ಲವೆಂದರೆ..., ಏಕೆಂದರೆ ಬೇಕಾದಷ್ಟು ಕಂಪನಿಗಳು ಇವತ್ತು ಈ ಒಂದು ಲೂಟಿ ಹೊಡೆಯುತ್ತಿದ್ದಾರೆ, ಇದಕ್ಕೆ ಅವಕಾಶವಾಗಬಾರದು. 4–5 ಜನರ ಮೇಲೆ ಕ್ರಮ ತೆಗೆದುಕೊಳ್ಳಿ, ಉದಾಹರಣೆಗೆ ಬಾಗಲಕೋಟೆ ಡಿ.ಸಿ.ಸಿ ಬ್ಯಾಂಕ್‌ನಿಂದ ಎಷ್ಟು ಹಣವನ್ನು ಕಟ್ಟಿದ್ದಾರೆ, ಇನ್ನು ಎಷ್ಟು ಹಣ ಬರಬೇಕು, ಇನ್ನು ಎಷ್ಟು ಹಣ ಕಟ್ಟಬೇಕು ಎನ್ನುವ ರಿಪೋರ್ಟ್ ತರಿಸಿಕೊಳ್ಳಿ. ಸುಮಾರು 133 ಕೋಟಿ ರೂಪಾಯಿ ಹಣ ರೈತನಿಗೆ ಕಟ್ಟಬೇಕಾಗಿದೆ ಎಂದು ಜಿಲ್ಲಾಧಿಕಾರಿಗಳು ಮಾಹಿತಿ ಕೊಟ್ಟಿದ್ದಾರೆ. ನಾನು ಎಲ್ಲಾ ತಾಲ್ಲೂಕಿಗೂ ಭೇಟಿ ಕೊಟ್ಟಿದ್ದೇನೆ. ವಿಶೇಷವಾಗಿ ಇಂತಹ ಬರಗಾಲ ಪರಿಸ್ಥಿತಿಯಲ್ಲಿ ರೈತರಿಗೆ ನಾವು ರಕ್ಷಣೆ ಮಾಡಲಿಲ್ಲವೆಂದರೆ ಯಾರೂ ಮಾಡುವುದಕ್ಕೆ ಸಾಧ್ಯವಿಲ್ಲ. ತಮಗೆ ಭಗವಂತ ದೊಡ್ಡ ಜವಾಬ್ದಾರಿಯ ಅವಕಾಶ ಮಾಡಿಕೊಟ್ಟಿದ್ದಾನೆ. ತಾವು ಇದರ ಬಗ್ಗೆ ಮುಂದಾಳತ್ವ ವಹಿಸಿಕೊಂಡು, ದನಕರುಗಳಿಗೆ ಒಂದು ವಿಶೇಷವಾದಂತಹ ಕಾರ್ಯಕ್ರಮ, ಗೋಶಾಲೆಗಳಿಗೆ, ನಿಜ ಬೇಕಾದಷ್ಟು ಆಗುತ್ತದೆ, ಸ್ಕೂಲ್‌ನಿಂದ ಕರೆದುಕೊಂಡು ಬಂದ ರೀತಿ ಬೆಳಿಗ್ಗೆ 8 ಗಂಟೆಗೆ ಕರೆದುಕೊಂಡು ಬರುವುದು ಹೋಗುವುದು, infrastructure ಅಲ್ಲಿ ಬೇಕಾದಷ್ಟು practical ಆಗಿ ತೊಂದರೆಗಳು ಆಗಬಹುದು. ಮಾತನಾಡುವುದಕ್ಕೆ ಅನುಕೂಲವಾಗಬಹುದು. ಆದರೆ ಸಾಯಂಕಾಲದ ಹೊತ್ತು, ನಾನು ನೋಡಿದ್ದೇನೆ, ಕೆಲವು ಗೋಶಾಲೆಗಳನ್ನು ಮಾಡುವುದು, ರಾತ್ರಿ ಹೊತ್ತು ಬೇರೆ ಪರಿಸ್ಥಿತಿ ಇರುತ್ತದೆ. ಆರೋಗ್ಯ, ಇವೆಲ್ಲಾ ಬೇಕಾದಷ್ಟು ಸಮಸ್ಯೆಗಳು ಇವೆ. ಆದ್ದರಿಂದ ರೈತರಿಗೆ ಹುಲ್ಲು ದೊರಕುವಂತಹ ಗ್ಯಾರಂಟಿ ಇರಬೇಕು. ಯಾವುದೇ ರೀತಿಯ ಸಮಸ್ಯೆ ಆಗಬಾರದು, ಗೋವುಗಳನ್ನು ಕಟಾವಿಗೆ ಕಳುಹಿಸಬಾರದು. ಗೋವುಗಳನ್ನು ಉಳಿಸುವುದಕ್ಕೆ ಈ ರೀತಿ ವಿಶೇಷವಾದಂತಹ ಸ್ಕೀಮ್‌ಅನ್ನು, ನಾವು ಮನುಷ್ಯರಿಗೆ ಯಾವ್ಯಾವ ರೀತಿ

ಸ್ಕೀಮ್‌ಗಳನ್ನು ತೆಗೆದುಕೊಂಡು ನಮ್ಮ ಬದುಕಿಗೆ ಮಾಡುತ್ತಿದ್ದೇವೆಯೋ ಅದೇ ರೀತಿ ಗೋವುಗಳನ್ನು . ಉಳಿಸುವುದಕ್ಕೆ ತಾವು ಅನೇಕ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರವೇನೆಂದರೆ, ರಾಜ್ಯಕ್ಕೆ ಮಾನ್ಯ ಶರದ್ ಪವಾರ್‌ರವರು ಬಂದಿದ್ದರು. ಜೈರಾಮ್ ರಮೇಶ್‌ರವರು ಬಂದಿದ್ದರು. ಮೀಟಿಂಗ್ ಮಾಡಿದ್ದಿರಿ. ಮೀಟಿಂಗ್ ಮಾಡಿ ಅವರು ಬಂದು ಹೋಗಿದ್ದು ಆಯಿತು, ನಾವೂ ರಿಪೋರ್ಟ್ ಕೊಟ್ಟೆವು, ನಾವು ದೆಹಲಿಗೆ ಹೋಗಿ ಹೇಳಿದೆವು, ನೀವೂ ಹೇಳಿದಿರಿ, ಎಲ್ಲಾ ಆಯಿತು. 100 ದಿನದಿಂದ 150 ದಿನಕ್ಕೆ ನರೇಗಾ ದುಡ್ಡನ್ನು ಹೆಚ್ಚು ಮಾಡಿದರು. ಎಲ್ಲಿ ಬರ ಇದೆ ಅಲ್ಲಿ ಹಣ ಬಂದಿತು. 50 ದಿನ extra ಎಂದರೆ, ಸಾವಿರಾರು ಕೋಟಿ ರೂಪಾಯಿಗಳ extra ಹಣ ಬರುವುದಕ್ಕೆ ಸರ್ಕಾರ ಮುಂದೆ ಬಂದಿತು. ಈ ಹಣವನ್ನು ಏನು ಮಾಡಬೇಕೆಂದು ಸರ್ಕಾರ ಒಂದೂ plan of action ಕೂಡ ಮಾಡಲಿಲ್ಲ. You did not give direction to the punchayats. Yes, Central Government has come out with a policy. ನರೇಗಾ ದುಡ್ಡು extra ಬಂದಿದೆ, ನೀನು ಯಾವ ರೀತಿ ಉಪಯೋಗಿಸಬೇಕು, ನೀನು ರೈತರಿಗೆ ಯಾವ ರೀತಿ ಸಹಾಯ ಮಾಡಬೇಕು, ಇವತ್ತು ಏನೆಲ್ಲಾ ಅವಕಾಶವಿದೆ, ವೈಯಕ್ತಿಕವಾಗಿ ಒಬ್ಬ ರೈತನಿಗೆ ಬೇರೆಯವರ ಜಮೀನಿಗೆ ಹೋಗಿ ಅವರು ಕೂಲಿ ಮಾಡಿಕೊಂಡು ತೊಂದರೆ ಅನುಭವಿಸುತ್ತಿದ್ದರೆ, ಅವನು ಅವಮಾನವಾಗುತ್ತದೆ ಎಂದು ಹೇಳಿ ತನ್ನ ಜಮೀನಿನಲ್ಲಿಯೇ ತಾನು ಇಂಗು ಗುಂಡಿ ಮಾಡಿಕೊಳ್ಳಲಿಕ್ಕೆ, ಜಮೀನು ಮಟ್ಟ ಮಾಡಿಕೊಳ್ಳಲಿಕ್ಕೆ, ಅಭಿವೃದ್ಧಿ ಮಾಡಿಕೊಳ್ಳಲಿಕ್ಕೆ, ರೇಷ್ಮೆ ಗಿಡ ನೆಡಲಿಕ್ಕೆ ಅವನಿಗೆ ಅವಕಾಶವಿದೆ. ವೈಯಕ್ತಿಕವಾಗಿ 10,000 ರೂಪಾಯಿಯಿಂದ 30,000, 40,000 ರೂಪಾಯಿಯವರೆಗೂ ಒಬ್ಬ ರೈತನಿಗೆ ನೇರವಾಗಿ ನೀವು ಸಹಾಯ ಮಾಡಲು ಅವಕಾಶವಿದೆ. ಯಾರ ದುಡ್ಡಲ್ಲಿ? ಕೇಂದ್ರ ಸರ್ಕಾರ ಕೊಟ್ಟಂತಹ ಈ 50 ದಿನದ ಹಣದಲ್ಲಿ. ಅದೇ ರೀತಿ State Government should have come out with a proper policy on this 50 days issue.

ಸರ್ಕಾರ ನರೇಗಾ ಹಣವನ್ನು ಉಪಯೋಗಿಸಿಕೊಳ್ಳುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಏಕೆಂದರೆ, ನರೇಗಾ ದುಡ್ಡಿನಲ್ಲಿ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಪಂಚಾಯತ್‌ಗಳು ಉದ್ಯೋಗವನ್ನು ಸೃಷ್ಟಿ ಮಾಡಬಹುದು ಇಲ್ಲವೆಂದರೆ, ನೇರವಾಗಿ ರೈತರಿಗೆ ಸಹಾಯ ಮಾಡಬಹುದು. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇದ್ದಾರೆ, till today, ಅವರು ಆರ್.ಡಿ.ಪಿ.ಆರ್ ಮಂತ್ರಿಯಾಗಿ ಕೆಲಸ ನಿರ್ವಹಿಸಿರುವ ಅನುಭವವಿದೆ. ಅವರಿಗೆ ಎಲ್ಲಾ ವಿಚಾರಗಳು ಗೊತ್ತಿದೆ. ಇವತ್ತು ಕೂಡ ಈ 50 ದಿನದ ದುಡ್ಡು ಏನು ಬಂದಿತು, ಈ ಹಣವನ್ನು ನೇರವಾಗಿ ರೈತರಿಗೆ ಮುಟ್ಟಿಸುವಂತಹ ಪ್ರಯತ್ನವನ್ನು ತಾವು ಮಾಡಬೇಕು. ಒಂದು ಕಡೆಯಲ್ಲಿ 15 ಲಕ್ಷ ರೈತರಿಗೆ ನಾವು ಸಾಲವನ್ನು ಮನ್ನಾ ಮಾಡಿದ್ದೇವೆ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ 90 ಲಕ್ಷ ಜನ ರೈತರು ಇದ್ದಾರೆ. ನಾವು nationalized bank ನವರನ್ನು ಮರೆತುಬಿಟ್ಟೆವು. ಸೊಸೈಟಿಗೆ ಸಾಲ ಹೋಗುವುದರ ಬಗ್ಗೆ ಮರೆತು ಬಿಟ್ಟೆವು. ಇಲ್ಲಿ ಕೆಲವು ಒಂದು ವರ್ಗಕ್ಕೆ ಮಾತ್ರ ಸಹಾಯವನ್ನು ಮಾಡಿದೆವು. ನಾವು ರೈತರನ್ನು ಇಲ್ಲಿ ಭಾಗ ಮಾಡಿಬಿಟ್ಟಿದ್ದೇವೆ. ಇನ್ನು 75 ಲಕ್ಷ ರೈತರು ಯಾರು ಇದ್ದಾರೆ ಅವರಿಗೆ ಏನಾದರೂ ಕಾರ್ಯಕ್ರಮವನ್ನು ರೂಪಿಸಬೇಕು. ಅವರುಗಳು ಗಲಾಟೆ ಮಾಡಿದಾಗ ಒಂದು ಸಾವಿರ ರೂಪಾಯಿಗಳನ್ನು ಕೊಡುವುದು ಎಂದು ತೀರ್ಮಾನವನ್ನು ಮಾಡಿದರು. ಇದರಲ್ಲಿ ಕೆಲವರಿಗೆ 200 ಬಂದಿದೆ, ಕೆಲವರಿಗೆ 250 ರೂಪಾಯಿಗಳು ಬಂದಿದೆ. ನಮ್ಮ ತಾಲ್ಲೂಕಿನಲ್ಲಿ 4.5 ಕೋಟಿ ರೂಪಾಯಿಗಳು ಬಂತು ಈಗ ಆ ಎಲ್ಲಾ ಚೆಕ್ಕುಗಳ distribution ಆಗುತ್ತಿದೆ. ಆದರೆ ಇವತ್ತು ನೇರವಾಗಿ ನರೇಗಾ ಹಣದಿಂದ ಯಾರಿಗೆ ನಾವು ಸಹಾಯ ಮಾಡುವುದಕ್ಕಾಗಲಿಲ್ಲ, ಯಾರಿಗೆ ನಾವು 25,000 ರೂಪಾಯಿಗಳನ್ನು ಕಟ್ಟುವುದಕ್ಕಾಗಲಿಲ್ಲ ಅಂತಹ ಎಲ್ಲಾ ರೈತರುಗಳು ಕೂಡ ಸಹಾಯ ಮಾಡುವುದಕ್ಕೆ ಇವತ್ತು ಅವಕಾಶವಿದೆ. ಇದರ ಬಗ್ಗೆ ಸರ್ಕಾರವು ಏನಾದರೂ ಕ್ರಮವನ್ನು ಕೈಗೊಂಡು ಉದ್ಯೋಗವನ್ನಾದರೂ ಕೊಡಲಿ, infrastructure ಬಗ್ಗೆ ಆಮೇಲೆ ನೋಡಿಕೊಳ್ಳೋಣ. ತಾವು

ಬೇಕಾದರೆ 2-3 ಸ್ಕೀಮ್‌ಗಳನ್ನು ನಿಲ್ಲಿಸಿ ನೇರವಾಗಿ ಕುಡಿಯುವ ನೀರಿನ ಬಗ್ಗೆ ಸಹಾಯ ಮಾಡಬೇಕು. ಕುಡಿಯುವ ನೀರಿನ ಬಗ್ಗೆ ಟ್ಯಾಂಕರ್‌ಗಳನ್ನು ಪರ್ಚೇಸ್ ಮಾಡುವುದಕ್ಕೆ, ಸರ್ಕಾರದಲ್ಲಿ ಪಂಚಾಯಿತಿ ಮುಖಾಂತರ ಟ್ಯಾಂಕರ್‌ಗಳನ್ನು ಪರ್ಚೇಸ್ ಮಾಡುವುದಕ್ಕೆ ಮತ್ತು ಮೋಟಾರಿಗೆ ದುಡ್ಡು, ಆಮೇಲೆ ವಿದ್ಯುಚ್ಛಕ್ತಿ ಇಲ್ಲದೆಯೆ ದೊಡ್ಡ ಸಮಸ್ಯೆಯಾಗುತ್ತಿದೆ. ದಯವಿಟ್ಟು ಸರ್ಕಾರವು ಮುಖ್ಯಮಂತ್ರಿಗಳಿಗೆ ತಿಳಿಸುವುದೇನೆಂದರೆ, ಒಂದು ಕುಡಿಯುವ ನೀರು, ಮತ್ತೊಂದು insurance policy, ಈ ನರೇಗಾ ಈ ಮೂರು ವಿಚಾರದಲ್ಲಿ ತಾವು ಗಮನವನ್ನು ಹರಿಸಬೇಕು. ಮಾನ್ಯ ಸಚಿವರಾದ ಶ್ರೀ ಸಿ.ಸಿ. ಪಾಟೀಲರ ಕ್ಷೇತ್ರಕ್ಕೂ ಸಹ ಹೋಗಿದ್ದೆವು. ನಾನು ಮತ್ತು ನಮ್ಮ ನಾಡಗೌಡರು ಹೋಗಿದ್ದೆವು. ಅಲ್ಲಿರುವಂತಹ ಪರಿಸ್ಥಿತಿಯನ್ನು ನೋಡಿದೆವು. ಸರ್ಕಾರವು ಎಲ್ಲಿದೆ ಸ್ವಾಮಿ? ಇಂತಹ ಸಂದರ್ಭದಲ್ಲಿ ಸರ್ಕಾರವು ರಕ್ಷಣೆಯನ್ನು ಮಾಡಲಿಲ್ಲವೆಂದರೆ ಈ ಸರ್ಕಾರವು ಈ ರಾಜ್ಯದಲ್ಲಿ ಏಕೆ ಇರಬೇಕು? ನಿಮಗೆ ಯಾರು ತೊಂದರೆಯನ್ನು ಮಾಡುತ್ತಾರೆ. ವಿರೋಧಪಕ್ಷದವರು ಈ ಕಾರ್ಯಕ್ರಮವನ್ನು ಮಾಡಬೇಡಿ ಎಂದು ಹೇಳಿದ್ದೇವಾ? ನಾವು ಇದಕ್ಕೆ ಅಡ್ಡಿ ಮಾಡಿದ್ದೇವಾ? ನಾವು ಎಲ್ಲಿಯೂ ಹೋಗಿಲ್ಲ. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹಣ ಬಂದಿದೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ನಿಮ್ಮದು ಒಂದು ಸ್ವಲ್ಪ ಹಣವನ್ನು ಇದಕ್ಕಾಗಿ ತೆಗೆದಿಡಬೇಕು. Come out with a policy. Yes, my Government is committed, ಒಂದೊಂದು ಕ್ಷೇತ್ರಕ್ಕೆ ರಾಜ್ಯ ಸರ್ಕಾರದಿಂದ ತಲಾ 2-2 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ. ಕೆಲವು ಕಡೆಯಲ್ಲಿ ಸುಮಾರು 15 ಕಿ.ಮೀ. ದೂರದಿಂದ ನೀರನ್ನು ತೆಗೆದುಕೊಂಡು ಬರುತ್ತಿದ್ದಾರೆ. ಜನರಿಗೆ ಉದ್ಯೋಗವಿಲ್ಲ, ಜನರು ಟೌನ್‌ಗಳಿಗೆ ಹೆಚ್ಚಾಗಿ ವಲಸೆ ಹೋಗುತ್ತಿದ್ದಾರೆ. ಉದಾ: ನನ್ನ ಕ್ಷೇತ್ರದಲ್ಲಿ ಸ್ವಾಮಿ, ಸುಮಾರು 60,000 ಜನರು ಉದ್ಯೋಗವಿಲ್ಲದೇ ಟೌನ್‌ಗೆ ಹಾಗೂ ಬೆಂಗಳೂರು ನಗರಕ್ಕೆ ಬಂದಿದ್ದಾರೆ. ನಮ್ಮ ಬೆಂಗಳೂರು ಪಕ್ಕ ಇರುವ ಕಡೆಯಲ್ಲಿಯೇ ನೋಡಿ ಬೇರೆ ಕಡೆಯಲ್ಲಿ

ಪರಿಸ್ಥಿತಿಯೇ ಬಹಳ ದೊಡ್ಡದು ಇದೆ. ಆದ್ದರಿಂದ ಇವತ್ತು ನಾನು ತಮ್ಮ ಮುಖಾಂತರ ಈ ರಾಜ್ಯ ಸರ್ಕಾರಕ್ಕೆ request ಮಾಡುವುದು, ಕುಡಿಯುವ ನೀರು, ರೈತನಿಗೆ ರಕ್ಷಣೆ ಮಾಡುವುದು, ಬೆಳೆ ವಿಮೆಯ ವಿಚಾರದಲ್ಲಿ ವಿಶೇಷವಾಗಿ ಒಂದೆರಡು ಕಂಪನಿಯವರ ಮೇಲೆ arrest ಮಾಡಿಸಿ ಸ್ವಾಮಿ. ಈ ಬಗ್ಗೆ ಒಂದು enquiry ಮಾಡಿಸಿ. ಅವರುಗಳ ಮೇಲೆ ಕೇಸ್ ಹಾಕಿಸಿ, ನೀನು ಏತಕ್ಕಾಗಿ ರೈತರ ದುಡ್ಡನ್ನು ಮೋಸ ಮಾಡುತ್ತಿದ್ದೀಯಾ, ನೀನು ಏತಕ್ಕಾಗಿ ಕಟ್ಟುತ್ತಿಲ್ಲ, ಇದಕ್ಕೆ ಯಾರು ಜವಾಬ್ದಾರಿ, ಎಷ್ಟು ಹಣ ಕಟ್ಟಿದ್ದಾನೆ, ಅವನು ಎಷ್ಟು ಹಣವನ್ನು ಕೊಡಬೇಕು ಎನ್ನುವಂತಹ ವಿಚಾರವನ್ನು ತಾವೆಲ್ಲರೂ ಕೇಳಿ ಈ ರೈತನಿಗೆ ರಕ್ಷಣೆ ಮಾಡಬೇಕು. ನಾನು ಮೇವಿನ ವಿಚಾರದ ಬಗ್ಗೆ ತಮ್ಮಲ್ಲಿ ಪ್ರಸ್ತಾವನೆಯನ್ನು ಮಾಡಿದೆ. ಒಂದು special ಬೀಜ ಬ್ಯಾಂಕ್ ಅನ್ನು ಮಾಡಿ ಒಂದು ತಾಲ್ಲೂಕಿನಲ್ಲಿ 100 ಜನ ರೈತರಿಗೆ create ಮಾಡಿ ಅವರಿಗೆ ಬೀಜವನ್ನು ಕೊಟ್ಟು ರೈತನಿಗೆ ಬೆಂಬಲ ಬೆಲೆಯನ್ನು ಕೊಟ್ಟು ಅವನು permanent ಆಗಿ ಒಂದೊಂದು ವರ್ಷ ಒಬ್ಬೊಬ್ಬನಿಗೆ ಮಾಡಿ ಇದಕ್ಕಾಗಿ ಸುಮಾರು 10–20 ಸಾವಿರ ರೂಪಾಯಿಗಳು ಖರ್ಚಾಗಬಹುದು. ಅವನಿಗೆ ಸುಮಾರು 40 ರಿಂದ 50 ಸಾವಿರ ರೂಪಾಯಿಗಳು ಸಿಗುತ್ತದೆ. ಅವನಿಗೆ ಹಣ ಸಿಗಲಿ ಬಿಡಿ, ಯಾವುದೋ ಊರಿಗೆ ಲಾರಿಯಲ್ಲಿ ಹೋಗಿ ತೆಗೆದುಕೊಂಡು ಅವರಿಗೆ ಕೊಡುವುದು ಇದನ್ನು ತಪ್ಪಿಸುವಂತಹದ್ದನ್ನು ತಾವು ಮಾಡಬೇಕು. ನಮ್ಮ ರೈತರಿಗೆ ರಕ್ಷಣೆಯನ್ನು ಕೊಡುವುದಕ್ಕೆ ಬೇಕಾದಷ್ಟು ಅವಕಾಶಗಳು ಇವೆ. ಯಾರ್‍ಯಾರಿಗೆ ಪಂಪುಸೆಟ್ಟುಗಳು ಇದೆ, ಈ ತರಹ ರೈತರಿಗೆ ಸಹಾಯ ಮಾಡುವಂತಹ ನಾವೆಲ್ಲಾ ಕಾರ್ಯಕ್ರಮಗಳನ್ನು ರೂಪಿಸಬಹುದು. ಈ ದೃಷ್ಟಿಯಲ್ಲಿ ತಾವು ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ವಿಶೇಷವಾಗಿ ಪ್ರತಿಯೊಂದು ಪಂಚಾಯಿತಿಯಲ್ಲಿಯೂ ಕೂಡ ಈ ಟ್ಯಾಂಕರ್‌ಗಳನ್ನು ಪರ್ಚೇಸ್ ಮಾಡುವುದಕ್ಕೆ ತಾವು ಪರ್ಮಿಷನ್ ಕೊಡಿ. ಏನು ಈ ಬರಗಾಲಕ್ಕೆ ಹಣ ಇದೆ, ನೀರಿನ ಟ್ಯಾಂಕರ್ ಬಗ್ಗೆ ಸುಮ್ಮನೆ ಹೇಳಿದ್ದಾರಷ್ಟೇ. ನೀವು ಇನ್ನೊಂದು ವಾರದಿಂದ ಕೆಲಸವನ್ನು ಪ್ರಾರಂಭ ಮಾಡದೆ ಇದ್ದರೆ ಬಹಳ

ದೊಡ್ಡ ಸಮಸ್ಯೆ ಉಂಟಾಗುತ್ತದೆ. ಜಿಲ್ಲಾಧಿಕಾರಿಗಳು ರಿಲೀಸ್ ಮಾಡುತ್ತಿಲ್ಲ, ಜೊತೆಗೆ ಟ್ಯಾಂಕರ್ ಇಲ್ಲವೆಂದರೆ ಲೆಕ್ಕ ಬರೆಯುವುದು 10 ಟ್ಯಾಂಕರ್ ಇದ್ದರೆ 100 ಟ್ಯಾಂಕರ್ ಇದೆ ಎಂದು ಲೆಕ್ಕ ಬರೆಯುತ್ತಾರೆ. Secretary ಒಂದಿಷ್ಟು ದುಡ್ಡು, ಪಂಚಾಯಿತಿ ಮೆಂಬರ್ಸ್ ಒಂದಿಷ್ಟು ದುಡ್ಡು, ಛೇರ್ಮನ್‌ಗೆ ಒಂದಿಷ್ಟು ದುಡ್ಡು ಎಂದು ಮಾಡಿಕೊಳ್ಳುತ್ತಾರೆ. ಕೊನೆಗೆ ಒಂದಿಷ್ಟು percentage ಎಂದು ಮಾಡಿಕೊಳ್ಳುತ್ತಾರೆ. ಈ ಕಥೆಯನ್ನು ಹೇಳಿದರೆ ಒಂದು ದೊಡ್ಡ history ಆಗುತ್ತದೆ. ಆ ಗರ್ಭಗುಡಿಯಲ್ಲಿರುವಂತಹ ರಹಸ್ಯವನ್ನು ನಾನು ಸದ್ಯಕ್ಕೆ ಬಿಚ್ಚಿ ಹೇಳುವುದಕ್ಕೆ ತಯಾರಿಲ್ಲ. ತಾವು ಏನಾದರೂ ಮಾಡಿ ಈ ರೈತನಿಗೆ ಸಹಾಯ ಮಾಡಬೇಕು. ನನ್ನ ಸ್ನೇಹಿತರು ಅರಣ್ಯ ಇಲಾಖೆಯ ಬಗ್ಗೆ ಹೇಳುತ್ತಿದ್ದಾರೆ. ಗುಡ್ಡಗಾಡು ಪ್ರದೇಶದಲ್ಲಿ ಬೇಕಾದಷ್ಟು ಹುಲ್ಲುಗಳು ಇದೆ. ಅವರುಗಳು ದನ–ಕರುಗಳು ಅರಣ್ಯದೊಳಗೆ ಹೋಗಲು ಬಿಡುತ್ತಿಲ್ಲ. ಏನಾದರೂ ಅವರುಗಳು ಒತ್ತುವರಿ ಮಾಡುವುದಿದ್ದರೆ ಅದನ್ನು ನಿಲ್ಲಿಸಲಿ. ಪಾಪ, ಅಫರ ಕಡೆಯಲ್ಲಿ ಸುಡುತ್ತಿದ್ದಾರಂತೆ, ದನ–ಕರುಗಳು ಅರಣ್ಯದೊಳಗೆ ಹೋಗಿ ಬಂದರೆ ಏನಾಗುತ್ತದೆ ಸ್ವಾಮಿ. ಈ ಅರಣ್ಯ ಇಲಾಖೆಯವರು ಜನರನ್ನು ಯಾರು ಹೋಗುವುದನ್ನು ನಿಲ್ಲಿಸುವುದಿಲ್ಲ. ಬೇಟೆಗಾರರು ಹೋಗುವುದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಈ ದನಕರುಗಳು ಹೋಗಿ ಬರುವುದನ್ನು ತಪ್ಪಿಸಿ ಈ ಅರಣ್ಯ ಇಲಾಖೆಯವರು ದೊಡ್ಡ ಸಾಧನೆಯನ್ನು ಮಾಡುತ್ತಿದ್ದಾರೆ. ಪಾಪ, ದನ–ಕರುಗಳು ಅಲ್ಲಿ ಹೋಗಿ ಮೇವು ತಿಂದುಕೊಂಡು ಬರುವುದಕ್ಕೆ ಬಿಡುತ್ತಿಲ್ಲ. ಈ ಎಲ್ಲಾ ವಿಚಾರದಲ್ಲಿ ಮೇವುಗಳಿಗೆ ರಕ್ಷಣೆ ಮಾಡಿ ಎಲ್ಲವೂ ಉಪಯೋಗಕ್ಕೆ ಬರದೇ ಇದ್ದರೆ national waste ಆಗುತ್ತದೆ. ದನಕರುಗಳು ಅರಣ್ಯದೊಳಗೆ ಹೋಗಿಬರಲಿ ತಪ್ಪೇನು ಇದೆ. ನಮ್ಮ ಕಡೆಯಲ್ಲಿ ಮೊದಲು ಎಲ್ಲಾ ಕಾಡುಗಳಿಗೆ ಇಂತಹ ಬರಗಾಲ ಬಂದಾಗ ನಮ್ಮ ದನ–ಕರುಗಳು ಅರಣ್ಯದೊಳಗೆ ಹೋಗುತ್ತಿದ್ದವು. ಈಗ ಎಲ್ಲವನ್ನು ನಿಲ್ಲಿಸಿಬಿಟ್ಟಿದ್ದಾರೆ. ದಯವಿಟ್ಟು ಈ ಬಗ್ಗೆ ಸರ್ಕಾರದವರು ಕುಳಿತುಕೊಂಡು plan of action ಮಾಡಿ ಅದು Forest Department ಇರಬಹುದು, Irrigation Department ಇರಬಹುದು, R.D.P.R.

Department, Agriculture Department, Animal Husbandry Department, Revenue Department ಇಷ್ಟು ಇಲಾಖೆಯ ಅಧಿಕಾರಿಗಳು ಕುಳಿತುಕೊಂಡು ಇಂತಹ ಬರಗಾಲ ಬಂದಾಗ ನಾವು ಯಾವ ರೀತಿಯಾಗಿ ರಕ್ಷಣೆಯನ್ನು ಮಾಡಬೇಕೆಂಬ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸಬೇಕು. ಇಲ್ಲವೆಂದರೆ ಈ ಸರ್ಕಾರಕ್ಕೆ ಒಂದು ದೊಡ್ಡ ಶಾಪ ಬಂದಂತೆ ಆಗುತ್ತದೆ. ಈ ರಾಜ್ಯದ ಮುಖ್ಯಮಂತ್ರಿಗಳು ಬಹುಶಃ ಇದರ ಬಗ್ಗೆ ಕೊನೆಯ ದಿನಗಳಲ್ಲಿ ಇಂತಹ ಒಂದು ದೊಡ್ಡ ಐತಿಹಾಸಿಕವಾದಂತಹ ತೀರ್ಮಾನ ಈ ರೈತನಿಗೆ ರಕ್ಷಣೆಯನ್ನು ಮಾಡಿ ಬೆಳೆ ವಿಮೆಯ ವಿಚಾರದಲ್ಲಿ, ಹುಲ್ಲು ಕೊಡುವಂತಹ ವಿಚಾರದಲ್ಲಿ, ಕುಡಿಯುವ ನೀರು ಕೊಡುವಂತಹ ವಿಚಾರದಲ್ಲಿ ಒಂದು ಮಹತ್ವವಾದಂತಹ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಂದು ನಂಬಿ, ತಾವು ನನಗೆ ಮಾತನಾಡುವುದಕ್ಕೆ ಒಂದು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ಇನ್ನು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದ್ದರೂ ಕೂಡ ಈ ಬಗ್ಗೆ ಇನ್ನು ಅನೇಕ ಸ್ನೇಹಿತರುಗಳು ಮಾತನಾಡುವವರಿದ್ದಾರೆ, ಅವರು ಮಾತನಾಡುತ್ತಾರೆ ಎಂದು ಹೇಳಿ ತಮಗೆ ವಂದಿಸಿ, ಮಾನ್ಯ ಮುಖ್ಯಮಂತ್ರಿಗಳಿಂದ ನಾನು ಉತ್ತರವನ್ನು ಮತ್ತು ಸಂಬಂಧಪಟ್ಟಂತಹ ಮಂತ್ರಿಗಳಿಂದ ನಿರೀಕ್ಷೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ):- ಮಾನ್ಯ ಉಪಾಧ್ಯಕ್ಷರೆ, ತಾವೇನು important issue, ಇಡೀ ರಾಜ್ಯವಲ್ಲ, ದೇಶದಲ್ಲಿ ಕರ್ನಾಟಕವು ಒಂದು ಭೀಕರವಾದಂತಹ ಬರಗಾಲವನ್ನು ಎದುರಿಸುತ್ತಿದೆ. ಈ ಬಗ್ಗೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಬಹಳ ಗಂಭೀರವಾಗಿ ಗಮನಿಸಬೇಕು. ಏಕೆಂದರೆ, ನಾವು ಕಳೆದ 2-3 ವರ್ಷಗಳಿಂದಲೂ ನೋಡುತ್ತಿದ್ದೇವೆ. ಏಕೋ ಇವರು ಅಧಿಕಾರಕ್ಕೆ ಬಂದಾಗಿನಿಂದಲೂ ಒಂದು ವರ್ಷ ಪ್ರವಾಹ ಬಂತು, ಎರಡು ವರ್ಷ ಬರಗಾಲ ಬಂತು, ಎಲ್ಲಾ ಕಡೆಯಲ್ಲಿ ಮತ್ತು ಕೇರಳ

ರಾಜ್ಯಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬಂದರು, ಈ ರಾಜ್ಯಕ್ಕೆ ಇನ್ನು correct ಆಗಿ ಆಶೀರ್ವಾದವಾಗಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಸುಮಾರು 157 ತಾಲ್ಲೂಕುಗಳು ಅದರಲ್ಲಿ ಕೇಂದ್ರ ಸರ್ಕಾರದವರೆ ಕೊಟ್ಟಿದ್ದಾರೆ. ದೇಶದಲ್ಲಿಯೇ ಬರಪ್ರದೇಶದಲ್ಲಿ ಕರ್ನಾಟಕ ನಂಬರ್–1 ಎಂದು ಹೇಳಿದ್ದಾರೆ. ಅವತ್ತಿನ date ನಲ್ಲಿ ಕರ್ನಾಟಕದಲ್ಲಿ 142 ತಾಲ್ಲೂಕುಗಳಲ್ಲಿ ಬರಗಾಲ, ಗುಜರಾತಿನಲ್ಲಿ 132 ತಾಲ್ಲೂಕಿನಲ್ಲಿ ಬರಗಾಲವಿದೆ, ಮಹಾರಾಷ್ಟ್ರದಲ್ಲಿ 122 ತಾಲ್ಲೂಕಿನಲ್ಲಿ, ರಾಜಸ್ಥಾನದಲ್ಲಿ ಬರಿ 5 ತಾಲ್ಲೂಕಿನಲ್ಲಿ ಬರಗಾಲ ಇದೆ ಎಂದು ಹೇಳಿದ್ದಾರೆ. ರಾಜಸ್ಥಾನ್ ಯಾವಾಗ ಅದು ಇಡೀ ದೇಶದಲ್ಲಿಯೇ ಅದೊಂದು ಮರಳುಭೂಮಿ ಇದೆ ಎಂದು ಇತ್ತು. ಅಲ್ಲಿ ಬರಗಾಲ ಇರುವುದು ಕೇವಲ 5 ಜಿಲ್ಲೆಯಲ್ಲಿ ಮಾತ್ರ ಇದೆ. ಇಲ್ಲಿ ನಾವು ನೋಡಿದರೆ ಇವತ್ತು ನಮ್ಮ ಕರ್ನಾಟಕ ಇಡೀ ದೇಶದಲ್ಲಿಯೇ ಗಮನವನ್ನು ಸೆಳೆದಿದೆ. ಪೇಪರ್ ಪ್ರಕಾರ ಕೇಂದ್ರ ಸರ್ಕಾರದಿಂದ ಸಾಕಷ್ಟು ಅನುದಾನ ಬರಬೇಕಾಗಿತ್ತು. ಇದರಲ್ಲಿ ಕರ್ನಾಟಕಕ್ಕೆ 195 ಕೋಟಿ ರೂಪಾಯಿಗಳು, ಮಹಾರಾಷ್ಟ್ರಕ್ಕೆ 501 ಕೋಟಿ ರೂಪಾಯಿಗಳೂ, ರಾಜಸ್ಥಾನಕ್ಕೆ 424 ಕೋಟಿ ರೂಪಾಯಿಗಳು, ಗುಜರಾತ್‌ಗೆ 320 ಕೋಟಿ ರೂಪಾಯಿಗಳು, ಯಾವಾಗ ಅಷ್ಟೊಂದು severe ಆಗಿ ಬರಗಾಲ ಇದೆ ಎಂದು ಅವರೇ ಪರಿಗಣಿಸಿ, ಅಲ್ಲಿ ಸ್ವಲ್ಪ ತಾರತಮ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಈಗ ಮುಖ್ಯವಾಗಿ ಹೋದ ವರ್ಷ assembly start ಆದ ತಕ್ಷಣ ವಿರೋಧಪಕ್ಷದವರು ಮತ್ತು ನಾವು ಒಟ್ಟಿಗೆ ಮೊಟ್ಟಮೊದಲು ಬರಗಾಲದ ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ. ಅದರ ಮೇಲೆ ಸುಮಾರು 3 ದಿನಗಳ ಕಾಲ ಚರ್ಚೆ ಮಾಡುತ್ತೇವೆ. ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತೇನೆಂದು ಹೇಳಿದರೆ ಅದ್ಯಾವುದು ಕೂಡ ಕಾರ್ಯರೂಪಕ್ಕೆ ಬಂದಿಲ್ಲ. ಈ ಸದನದಲ್ಲಿ ಮಾನ್ಯ ಡಿ.ಸಿ.ಎಂ. ರವರು ಇದ್ದಾರೆ. ಇಲ್ಲಿ ನಾವು ಮುಖ್ಯವಾಗಿ ಕುಡಿಯುವ ನೀರಿನ ಬಗ್ಗೆ ಮಾತನಾಡಿದರೆ ನಿಜಕ್ಕೂ ಇಂತಹ ಒಂದು ಪರಿಸ್ಥಿತಿಯಲ್ಲಿ ನಮ್ಮ ಕರ್ನಾಟಕ ರಾಜ್ಯವು ಹೋಗುತ್ತಿದೆ ಅಂದರೆ ಅದು

ವಿಶೇಷವಾಗಿ ನಮ್ಮ ಭಾಗದಲ್ಲಿ ನಾವು ಯಾವತ್ತಿಗೂ 300 ಅಡಿ ಕೆಳಗಡೆ ಬೋರ್‌ವೆಲ್ dig ಮಾಡಿದ್ದಿಲ್ಲ. ಇತ್ತೀಚೆಗೆ ಸುಮಾರು 800 ಅಡಿ ಇವತ್ತು ಬೀದರ್‌ನಲ್ಲಿ drilling ನಡೆಯುತ್ತಿದೆ. ಹಾಗಾಗಿ ಇವತ್ತು ಕುಡಿಯುವ ನೀರಿಗಾಗಿ ತೊಂದರೆಯಾಗಿದೆ. ಹೋದವರ್ಷ ಕುಡಿಯುವ ನೀರಿಗಾಗಿ ಸರ್ಕಾರದಿಂದ ದುಡ್ಡು ತೆಗೆದುಕೊಳ್ಳುವ ಬಗ್ಗೆ ಹರಸಾಹಸವನ್ನು ಮಾಡಿದೆವು. ಸರ್ಕಾರವು ಸುಮಾರು 1 ಲಕ್ಷ 2 ಕೋಟಿ ಬಜೆಟ್ ಮಂಡನೆ ಮಾಡಿರುವಂತಹ ಸರ್ಕಾರವು ಯಾವ ನಿಟ್ಟಿನಲ್ಲಿ ಜನರಿಗೆ ಮೂಲಭೂತ ಸೌಕರ್ಯದಲ್ಲಿ ಮೊಟ್ಟಮೊದಲಿಗೆ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡಬೇಕು. ನಮ್ಮ ಮನೆಯ ಮುಂದೆ ಬೋರ್‌ಬೆಲ್ ಕೊರೆಸಿ ಎಂದು ಕೇಳಿದ್ದೇವೆಯೇ? ಆ ಜನರಿಗೆ ಕುಡಿಯುವ ನೀರಿಗಾಗಿ ಹಣ ಕೊಡುವುದಿಲ್ಲವೆಂದರೆ ಇದೆಂಥ ಸರ್ಕಾರ? ನಮಗೆ ನಿಜವಾಗಲೂ ಬಹಳ ಬೇಸರವಾಗುತ್ತಿದೆ. ನಾವು ಶಾಸಕರಾಗಿ ಹತ್ತು ವರ್ಷಗಳಾಯಿತು. ಎರಡು ವರ್ಷಗಳಿಂದ ಹರಸಾಹಸ ಮಾಡುತ್ತಿದ್ದೇವೆ. ಹೋದ ವರ್ಷ ನಮ್ಮ ಎಂ.ಎಲ್.ಎ. ಫಂಡ್‌ನಿಂದ 40.00 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಯಾವಾಗಲೂ ಇಷ್ಟು ಹಣವನ್ನು ಕೊಟ್ಟಿಲ್ಲ. CRF Norms ಬೋರ್‌ವೆಲ್ ಕೊರೆಯಲಿಕ್ಕೆ ಹಣ ಸಿಗುವುದಿಲ್ಲ. ಇವತ್ತಿನ ದಿನಾಂಕದಲ್ಲಿ ಹೇಳಿ. 157 ನಾವು ಚರ್ಚೆ ಮಾಡುತ್ತಿದ್ದೇವೆ. RDPR ಮಂತ್ರಿಗಳು ಸಹ ಇಲ್ಲೇ ಇದ್ದಾರೆ. CSE ಗೆ ಫೋನ್ ಮಾಡಿ ಕೇಳಿ. ಅವರ ಹತ್ತಿರ ಬೋರ್‌ವೆಲ್ ಕೊರೆಸಲಿಕ್ಕೆ ಎಷ್ಟು ಹಣ ಇದೆ? ಇವತ್ತು ಸಹ ಅವರ ಹತ್ತಿರ ಹಣವೇ ಇಲ್ಲ. ಅವರು ಬಹಳ ಕಾಳಜಿ ತೆಗೆದುಕೊಂಡಿದ್ದಾರೆ. ನಮ್ಮ ಬೀದರ್‌ಗೆ ಎರಡು ಸಾರಿ ಬಂದು ಯಂತ್ರಗಳನ್ನೆಲ್ಲಾ ವ್ಯವಸ್ಥೆಗಳನ್ನು ಸುಧಾರಣೆ ಮಾಡಲಿಕ್ಕೆ ಬಹಳಷ್ಟು ಪ್ರಯತ್ನ ಮಾಡಿದ್ದಾರೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ ಹತ್ತು ದಿವಸಗಳ ಹಿಂದೆ ನಾನು ಕೆಡಿಪಿ ಸಭೆ ಮಾಡಿದ್ದೇವೆ. ಆಗ ಬೋರ್‌ವೆಲ್ ಕೊರೆಸಲಿಕ್ಕೆ ಎಷ್ಟು ಹಣ ಬೇಕಾಗುತ್ತದೆಂದು ನಾವು ಕೇಳಿದರೆ ಒಂದೊಂದು ಕ್ಷೇತ್ರಕ್ಕೆ 8.00 ಲಕ್ಷ ರೂಪಾಯಿಗಳು ಬಂದಿವೆ ಸರ್. ಇಡೀ ಜಿಲ್ಲೆಗೆ ಸೇರಿ 40.00 ಲಕ್ಷ ರೂಪಾಯಿಗಳು ಬಂದಿವೆ. ನಾವು ಇಲ್ಲಿ ಕೇವಲ ಕಾಟಾಚಾರ

ಚರ್ಚೆಯಾಗುತ್ತಿದೆ ಅಷ್ಟೇ. ಗಂಭೀರವಾದ ಚರ್ಚೆಯಾಗುತ್ತಿಲ್ಲ. ನಾವು ಇಷ್ಟು ದಿವಸ, ಇಷ್ಟು ಗಂಟೆ ಮಾತನಾಡಿದ್ದೇವೆ. ರಾಜ್ಯದ ಜನತೆ ಪರವಾಗಿ ಇಷ್ಟು ಕೇಳಿದೆವು. ನಮ್ಮ ಕೃಷಿ ಸಚಿವರು ಈಗ ಬರಗಾಲ ಎಲ್ಲಿದೆ ಎಂದು ಹೇಳಿದರು. ಬಹಳ ಒಳ್ಳೆಯ ರೀತಿಯಿಂದ ಬೆಳೆಗಳಿವೆ ಎಂದು ಅವರದೇ ಹೇಳಿಕೆ ಕೊಟ್ಟಿದ್ದಾರೆ. ಬರದಿಂದ 20 ಲಕ್ಷ ಹೆಕ್ಟೇರ್ ಬೆಳೆ ಹಾನಿ–ಕತ್ತಿ. ಇದು ಅವರ ಹೇಳಿಕೆ. ಭೀಕರ ಬರಗಾಲದಿಂದ ರಾಜ್ಯದ 22 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿಲ್ಲ. ಬಿತ್ತನೆ ಆಗಿರುವ ಪ್ರದೇಶದಲ್ಲಿ 20 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದೆ. ಈ ಬರಗಾಲ ಅತ್ಯಂತ ಭೀಕರ ಎಂದು ಕೃಷಿ ಸಚಿವ ಉಮೇಶ್ ಕತ್ತಿಯವರು ಹೇಳಿದ್ದಾರೆ. ಈಗ ಹೇಳಿದರಲ್ಲಪ್ಪಾ, ಏನಾಗಿಲ್ಲ, ಬೆಳೆಗಳಾಗಿವೆ ಎಂದು. ರಾಜ್ಯದವರಿಗೆ ಬರಗಾಲ ಬಂದಿದೆ, ಉಮೇಶ್ ಕತ್ತಿಯವರಿಗೆ ಬರಗಾಲ ಬಂದಿಲ್ಲ ಅಷ್ಟೇ.

As Agriculture Minister he is very powerful and very safe, but farmers are very depressed. ಶನಿವಾರ ನಗರದಲ್ಲಿ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ಜಿಲ್ಲಾಡಳಿತ ಕೃಷಿ ಸಚಿವರು, ಸಂಬಂಧಪಟ್ಟ ಇಲಾಖೆಯವರು ಆಯೋಜಿಸಿದ್ದ ಮೇಳದಲ್ಲಿ ಅವರು ಈ ಮಾತನ್ನು ಹೇಳಿದ್ದರು. ಅದು ದಿನಾಂಕ 02.09.2012 ರಂದು ಸಚಿವರು ಈ ಮಾತನ್ನು ಹೇಳಿದ್ದರು. ಈಗ ಅದಕ್ಕಿಂತ ಗಂಭೀರವಾದ ಪರಿಸ್ಥಿತಿ ಇದೆ. ಸೆಪ್ಟೆಂಬರ್ ತಿಂಗಳಿನ ನಂತರ ಎಲ್ಲಿಯೂ ಮಳೆ ಆಗಿಲ್ಲ, ಬೆಳಗಾಂ, ಬೀದರ್, ಬೆಂಗಳೂರು ಜಿಲ್ಲೆಗಳಲ್ಲಿ ಎಲ್ಲಿಯೂ ಮಳೆಯಾಗಿಲ್ಲ. ಅದಕ್ಕಿಂತ ಗಂಭೀರ ಪರಿಸ್ಥಿತಿ ಇದೆ. ಮಳೆ ಎಷ್ಟಾಗಿದೆ ಎಂದು ನಿಮಗೆ ಗೊತ್ತಿದೆಯೇ? ಬೋರ್‌ವೆಲ್‌ಗಾಗಿ 800 ಅಡಿಯವರೆಗೆ ಕೊರೆಯುತ್ತಿದ್ದೇವೆ. ಬೆಳೆಗೆ ಎಷ್ಟು ನೀರು ಬೇಕು. ಅಷ್ಟು ಕಷ್ಟವಾಗಿ ಕುಡಿಯುವುದಕ್ಕೆ ಸಹ ನೀರು ಇಲ್ಲ. ಕೆರೆಗಳಲ್ಲಿಯೂ ಸಹ ನೀರು ಇಲ್ಲ. ರಾಜ್ಯದಲ್ಲಿ ತೀವ್ರ ಬರಗಾಲ ಇರುವುದರಿಂದ 25,000 ರೂಪಾಯಿಗಳ ಸಾಲ ಪಡೆದ ರೈತರ ಸಾಲವನ್ನು ಮನ್ನಾ ಮಾಡಲು ರಾಜ್ಯ ಸರ್ಕಾರ ತೀರ್ಮಾನ ಮಾಡಿದೆ. ನಿನ್ನೆ ಘನತೆವೆತ್ತ ರಾಜ್ಯಪಾಲರ ಬಾಯಿಂದ ಇಷ್ಟು ದೊಡ್ಡ ಸುಳ್ಳು ಹೇಳಿಸಬೇಕೇ?

'In view of the severe drought condition and amount of Rs. 3,600 crores of crop loans has been waived from Co-operative Banks upto Rs. 25.000/- per farmer.' Waive ಆಗಿದೆಯೇ? Complete ಆಗಿದೆಯೇ? ಎಲ್ಲಾಗಿದೆ?

ಶ್ರೀ ಉಮೇಶ್ ವಿ. ಕತ್ತಿ:– Due date ಬಂದಂತೆ ಅವರ ಹಣವನ್ನು ಕಟ್ಟುತ್ತಿದ್ದೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್:– ಎಲ್ಲಿ ಕಟ್ಟುತ್ತಿದ್ದೀರಿ ಹೇಳಿ, ಎಷ್ಟು ಕೋಟಿ ರೂಪಾಯಿಗಳಾಗಿವೆ ಇವತ್ತಿನವರೆಗೆ ಹೇಳಿ.

ಶ್ರೀ ಅಮರೇಗೌಡ ಬಯ್ಯಾಪುರ:– ಇಲ್ಲಿಯವರೆಗೆ ಸರ್ಕಾರ ಎಷ್ಟು ಕೋಟಿ ಹಣ ಕೊಟ್ಟಿದ್ದಾರೆ. ಇಲ್ಲಿಯವರೆಗೆ ಯಾವುದೇ ಸೊಸೈಟಿಗೆ ಜಮಾ ಆಗಿಲ್ಲವೆಂದು ಹೇಳುತ್ತಿಲ್ಲ.

ಶ್ರೀ ಉಮೇಶ್ ವಿ. ಕತ್ತಿ:– ರಾಜ್ಯ ಸರ್ಕಾರ ಬರಗಾಲದಿಂದ ರೈತರಿಗೆ ಸಾಲ waive ಮಾಡಿದ್ದೇವೆ. ಪೂರ್ಣ ಪ್ರಮಾಣದ ಹಣವನ್ನು ಕಟ್ಟುತ್ತಿದ್ದೇವೆ. ಪ್ರತಿ ತಿಂಗಳು ಬಂದಂಥ ಬೇಡಿಕೆಯನ್ವಯ ಹಣವನ್ನು ಕಟ್ಟುತ್ತಿದ್ದೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್:– ಇವತ್ತಿನವರೆಗೆ ಎಷ್ಟು ದುಡ್ಡು ಕಟ್ಟಿರುವಿರಾ ಎಂಬ ಬಗ್ಗೆ ಮಾಹಿತಿ ಕೊಡಿ.

ಶ್ರೀ ಅಮರೇಗೌಡ ಬಯ್ಯಾಪುರ:– ನಮ್ಮ ರಾಯಚೂರು, ಕೊಪ್ಪಳ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರನ್ನು ಕೇಳಿದರೆ ಇವತ್ತಿನವರೆಗೆ ಒಂದು ರೂಪಾಯಿ ಜಮಾ ಆಗಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ:– ಡಿ.ಸಿ.ಸಿ. ಬ್ಯಾಂಕಿನಿಂದ ಅವರು ಏನು due ಇರುತ್ತದೆ ಅದನ್ನು ಪ್ರತಿ ತಿಂಗಳು claim ಮಾಡುತ್ತಾರೆ. ಪ್ರತಿ ತಿಂಗಳು ಡಿ.ಸಿ.ಸಿ. ಬ್ಯಾಂಕಿಗೆ ಅವರು claim ಮಾಡುವ ಹಣ ಬಿಡುಗಡೆ ಮಾಡಿದ್ದೇವೆ.

(ಗೊಂದಲ)

ಶ್ರೀ ಅಮರೇಗೌಡ ಬಯ್ಯಾಪುರ:- ಇದರ ಬಗ್ಗೆ ಸರಿಯಾದ ಮಾಹಿತಿ ತರಿಸಿ ಕೊಡಿ. ನಮಗೆ ತಪ್ಪು ಮಾಹಿತಿ ಕೊಟ್ಟರೆ ಹೇಗೆ? ಬೆಳಿಗ್ಗೆಯಾದರೂ computer ನಿಂದ ನಮಗೆ ಮಾಹಿತಿ ಒದಗಿಸಿ ಕೊಡಿ. ಟ್ರೆಜರಿ ಬಿಲ್ ಎಷ್ಟು ಆಗಿದೆ ಎಂಬ ಜಿಲ್ಲಾವಾರು ಮಾಹಿತಿಯನ್ನು ಕೊಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ತಪ್ಪು ಮಾಹಿತಿ ಕೊಡುವ ಪ್ರಶ್ನೆಯೇ ಇಲ್ಲ.

ಶ್ರೀ ಬಂಡೆಪ್ಪ ಕಾಶೆಂಪೂರ್:- ಈಗ ಅವರು ಏನು ಹೇಳಿದ್ದಾರೆ ಅದು ಹಂತ ಹಂತವಾಗಿ amount cut ಆಗುತ್ತಿದೆ ಎಂದು ನಮಗೂ ಗೊತ್ತಿದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- 3,600-00 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿರುವುದು ನಿಜ. ಪ್ರತಿ ತಿಂಗಳು ಡಿ.ಸಿ.ಸಿ ಬ್ಯಾಂಕಿನವರು ಏನು claim ಮಾಡುತ್ತಾರೆ ಅದನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್:- ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಏನು ಹೇಳುತ್ತಾರೆಂದರೆ, 'In view of the severe drought condition' ಸುರೇಶ್ ಕುಮಾರ್ ಸರ್ ತಾವು ಇದರಲ್ಲಿ ಬಹಳ ಪರಿಣಿತರಿದ್ದೀರಿ. Word, Word ಬಗ್ಗೆ ತಾವು ಕಾನೂನು ತೆಗೆದು ನಮಗೆ ಹೇಳುತ್ತಿರುತ್ತೀರಿ. 'An amount of Rs. 3,600 crores of crop loans availed from Co-operative Banks upto Rs. 25,000/- per farmer. For 15 lakhs farmers has been waived off by the Government' ಈ ಬಗ್ಗೆ ಏಕೆ ಸುಳ್ಳು ಹೇಳುತ್ತೀರಿ? ಉಮೇಶ್ ಕತ್ತಿಯವರೆ ಇವತ್ತಿನ ದಿನಾಂಕದವರೆಗೆ ಯಾವುದೇ ಹಣ ಕೊಟ್ಟಿಲ್ಲ. ಸಚಿವರು ಸುಳ್ಳು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಉಮೇಶ್ ವಿ. ಕತ್ತಿ:- ಈಗ due date ಬರದೆ ಅವನು ಪೇಮೆಂಟ್ ಮಾಡದಿದ್ದಾಗ.. ನೀವು ಏಕದಂ ತಕ್ಷಣ ಈಗಲೇ ಕೊಡಿ ಎಂದರೆ ಹೇಗೆ?

ಶ್ರೀ ಬಂಡೆಪ್ಪ ಕಾಶೆಂಪೂರ್:- ಅದು ನಮಗೂ ಅರ್ಥವಾಗುತ್ತಿದೆ. ನೀವು 15 ಲಕ್ಷ ರೈತರಿಗೆ waive already drought condition ನೋಡಿ ನಾವು ಮಾಡಿಬಿಟ್ಟಿದ್ದೇವೆಂದು ಹೇಳಿದ್ದೀರಿ. ಇನ್ನೊಂದು ಅರ್ಧ ಗಂಟೆಯಲ್ಲಿ ಉಮೇಶ್ ಕತ್ತಿಯವರೇ ಮಾಹಿತಿ ತೆಗೆದುಕೊಳ್ಳಿ. ಇವತ್ತಿನವರೆಗೆ 3,600 ಕೋಟಿ ರೂಪಾಯಿಗಳು ಮನ್ನಾ ಆಗಿದೆಯೇ? ಅವರ ಅಕೌಂಟ್‌ನಲ್ಲಿ ಹಣ ಕಡಿಮೆ ಆಗಿದೆಯೇ? ಎಂಬ ಬಗ್ಗೆ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:- ಯಾವಾಗ ಅವರು claim ಮಾಡುತ್ತಾರೆ ಆಗ ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್:- ಅಂದರೆ ಸಾಲ ಬಿಡುಗಡೆ ಆಗುತ್ತದೆಂದು ಹೇಳಿ. Next dates ಬರುತ್ತದೆ. Dates ಬಂದಾಗ ಅದು ಕಡಿಮೆ ಆಗುತ್ತದೆ. ನಾವು ಸ್ಪಷ್ಟವಾಗಿ ಒಂದು ಮಾಹಿತಿ ಕೇಳಿದರೆ ಅದಕ್ಕೂ ಇವರು ಸರಿಯಾಗಿ ಉತ್ತರಿಸುತ್ತಿಲ್ಲ. ಕಾರಜೋಳರವರೆ ಆ dates ಬಂದಾಗ ಬಿಡುಗಡೆ ಮಾಡುವುದು ನಮಗೂ ಗೊತ್ತಿದೆ.

ಶ್ರೀ ಗೋವಿಂದ ಎಂ. ಕಾರಜೋಳ:- ನಾವು ಬಜೆಟ್‌ನಲ್ಲಿ ಒಂದೇ ಸಾರಿ announce ಮಾಡಿದ್ದೇವೆ. ರೈತರ ಸಾಲದ ಮೊತ್ತ 3600 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದೇವೆ. ಇಲ್ಲಿ ಯಾರಾದರೂ ಡಿ.ಸಿ.ಸಿ ಬ್ಯಾಂಕಿನವರು ಇದ್ದರೆ ಎದ್ದು ನಿಂತು ಹೇಳಿ. ಅವರು claim ಮಾಡಿದಾಗ ಪ್ರತಿ ತಿಂಗಳು ಬಿಡುಗಡೆ ಆಗುತ್ತಿದೆ. ಇದರಿಂದ ರೈತರಿಗೆ ಲಾಭವಾಗಿದೆಯೇ ಇಲ್ಲವೇ? ರೈತರ ಸಾಲ ಮನ್ನಾ ಆಗಿದೆಯೇ ಅಲ್ಲವೇ?

ಶ್ರೀ ಬಂಡೆಪ್ಪ ಕಾಶೆಂಪೂರ್:- ಕುಮಾರಸ್ವಾಮಿಯವರು ಇದ್ದಾಗ ಒಂದೇ ಬಾರಿಗೆ 25,000 ರೂಪಾಯಿಗಳ ಸಾಲ ಮನ್ನಾ ಮಾಡಿದರು.

ಶ್ರೀ ಗೋವಿಂದ ಎಂ. ಕಾರಜೋಳ:– ಓಬಿರಾಯನ ಕಾಲದ ಮಾಹಿತಿ ಹೇಳಬೇಡಿ. ಇವತ್ತಿನ ವಿಷಯದ ಬಗ್ಗೆ ಹೇಳಿ. ಇವತ್ತು ನಾವು ಹಣ ಬಿಡುಗಡೆ ಮಾಡಿದ್ದೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್:– ಇವತ್ತಿನದೇ ನಾವು ಹೇಳುತ್ತಿರುವುದು. ನೀವು ಎಷ್ಟು ಸುಳ್ಳು ಹೇಳುತ್ತಿದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ:– ನಾವು ಸುಳ್ಳು ಹೇಳುತ್ತಿಲ್ಲ, ಸತ್ಯವನ್ನೇ ಹೇಳುತ್ತಿದ್ದೇವೆ. ಹಣವನ್ನು ಬಿಡುಗಡೆ ಮಾಡಿದ್ದೇವೆ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ:– ಹಿಂದೆ ಎಷ್ಟು ಸುಳ್ಳುಗಳು ಹೇಳಿದ್ದಾರೆಂಬ ಬಗ್ಗೆ ಉದಾಹರಣೆಗಳು ಬಹಳಷ್ಟಿವೆ.

ಶ್ರೀ ಕೆ.ರಾಜು:– ಮುಖ್ಯಮಂತ್ರಿಯಿಂದ ಆದೇಶವಾಗಿದೆಯೇ ಹೊರತು ಯಾವುದೇ ಡಿ.ಸಿ.ಸಿ. ಬ್ಯಾಂಕ್‌ಗೆ ಹಣ ಹೋಗಿಲ್ಲ. ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆಯೆಂಬ ಮಾಹಿತಿಯನ್ನು ತರಿಸಿ. ಖಂಡಿತ ಯಾರಿಗೂ ಹಣ ಹೋಗಿಲ್ಲ.

(ಗೊಂದಲ)

ಉಪಾಧ್ಯಕ್ಷರು:– ಇನ್ನೂ ಸಾಕಷ್ಟು ಅವಕಾಶಗಳಿದೆ, ದಿವಸಗಳಿದೆ. ಲಿಖಿತವಾಗಿ ಪ್ರಶ್ನೆಗಳನ್ನು ಕೇಳಿ ಹೆಚ್ಚಿನ details ಕೊಡುತ್ತಾರೆ.

ಶ್ರೀ ಬಂಡೆಪ್ಪ ಕಾಶಂಪೂರ್ (ಬೀದರ್ ದಕ್ಷಿಣ):– ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ವಿಷಯ ಮುಂದುವರೆಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಹತ್ತು ದಿವಸಗಳ ಹಿಂದೆ ನಾನು ಕೆ.ಡಿ.ಪಿ ಸಭೆ ಮಾಡಿದಾಗ ಅವರ ಬಳಿ ಬೋರ್‌ವೆಲ್ ಕೊರೆಯುವುದಕ್ಕೆ ಹಣವಿಲ್ಲ. ಎಷ್ಟು ಹಣವಿದೆಯೆಂದು ಕೇಳಿದರೆ ಒಂದು ಮತಕ್ಷೇತ್ರಕ್ಕೆ ಎಂಟು ಲಕ್ಷ ರೂಪಾಯಿಗಳಿದೆಯೆಂದು ಹೇಳಿದರು. ಇದು ಶಾಸಕರಿಗೂ ಗೊತ್ತಿದೆ. ಏಕೆಂದರೆ ಅವರು ಅಲ್ಲಿ ಕೆಲಸ ಮಾಡಿರುತ್ತಾರೆ. ಬರಗಾಲವನ್ನು ನಿರ್ವಹಣೆ ಮಾಡುವುದಕ್ಕೆ ಈ ಸರ್ಕಾರ ಎಷ್ಟು serious ಆಗಿ ಪ್ರಯತ್ನಿಸುತ್ತಿದೆ? Last session ನಲ್ಲಿ last day

ಮಾನ್ಯ ಮುಖ್ಯಮಂತ್ರಿಗಳು ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಆ ಹಣ ಇಲ್ಲಿಯವರೆಗೆ ಬಂದಿಲ್ಲ. ಸುಮಾರು ಐದಾರು ವರ್ಷಗಳ ಹಿಂದೆ ಬರಗಾಲವೆನ್ನುವುದು ಬಂದ ತಕ್ಷಣ ಎರಡು ರೀತಿಯಲ್ಲಿ ಕೆಲಸ ಕಾರ್ಯಗಳು ಮತಕ್ಷೇತ್ರದಲ್ಲಿ ನಡೆಯುತ್ತಿತ್ತು. ಒಂದು ಬೋರ್‌ವೆಲ್ ಕೊರೆಸಿ ತಕ್ಷಣ ನೀರು ಕೊಡಿಸುವ ಕೆಲಸವಾಗುತ್ತಿತ್ತು. ಮತ್ತೊಂದು water conservation, ಗೋಕಟ್ಟೆ ತೆಗೆದುಕೊಳ್ಳುವುದು ಹಾಗೂ ಚೆಕ್ ಡ್ಯಾಂ ತೆಗೆದುಕೊಳ್ಳುವುದು ಈ ರೀತಿ ಕೆಲಸವಾಗುತ್ತಿತ್ತು. ಹೋದ ವರ್ಷ ಇಂತಹ ಭೀಕರ ಬರಗಾಲದ ಸಂದರ್ಭದಲ್ಲಿ ನಾವು ಕೇವಲ ಬೋರ್‌ವೆಲ್ ಕೊರೆಸುವುದರಲ್ಲಿ busy ಆಗಿದ್ದೇವೆ. ಎಲ್ಲೂ ಗೋಕಟ್ಟೆ ಹಾಗೂ ಚೆಕ್ ಡ್ಯಾಂ ಕೆಲಸ ಆಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ವರ್ಷ ಇಷ್ಟು serious ಆಗಿ ನಾವು ಚರ್ಚೆ ಮಾಡುವಾಗ ಈ ಸರ್ಕಾರ ಜನರ ಬಗ್ಗೆ ಬದ್ಧತೆಯನ್ನು ತೋರಿಸಬೇಕು. ಈ ಸರ್ಕಾರ ನಾಳೆ ಹೋಗುತ್ತದೋ, ನಾಡಿದ್ದು ಹೋಗುತ್ತದೋ, ಯಾವತ್ತಾದರೂ ಹೋಗಲಿ ನಾನು ಹೇಳುವುದು ಇವತ್ತಿನ date ನಲ್ಲಿ ನೀವೇಕೆ ಹಣ ಖರ್ಚು ಮಾಡುವುದಕ್ಕೆ ಹಿಂದೇಟು ಹಾಕುತ್ತಿದ್ದೀರಿ? ಸರ್ಕಾರದ ಬೊಕ್ಕಸದಲ್ಲಿ ಹಣವಿಲ್ಲವೆಂದ ಹಾಗೆ ಆಯಿತು. ಕುಡಿಯುವ ನೀರಿಗೆ ಹಣವಿಲ್ಲವೆಂದರೆ ಸರ್ಕಾರ ಇನ್ನಾವುದಕ್ಕೆ ಹಣ ಖರ್ಚು ಮಾಡುತ್ತಿದೆ? ಮತ್ತೆ ನಾಲ್ಕು ದಿವಸದಲ್ಲಿ ಬಜೆಟ್ ಇದೆ. ಅದರಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳ ಮೇಲೆ ಎಷ್ಟು ಕೋಟಿ ರೂಪಾಯಿಗಳಿರುತ್ತದೆಂದು ಗೊತ್ತಿಲ್ಲ. ಇಂತಹ ಒಂದು serious ವಿಷಯವನ್ನು ನಾವು ಬಹಳ ಗಂಭೀರವಾಗಿ ಚರ್ಚೆ ಮಾಡಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಬೀದರ್‌ಗೆ ಬಂದಿದ್ದಾಗ ಅದರಲ್ಲೂ ವಿಶೇಷವಾಗಿ ನರೇಗಾ ಕಾಮಗಾರಿಗಳು ಆಗಿಲ್ಲವೆಂದು serious ಆಗಿ ಹೇಳಿದ್ದರು. ವಿಶೇಷವಾಗಿ ನಮ್ಮ ಭಾಗದಲ್ಲಿ ಇವತ್ತು ಕಣ್ಣೀರು ಬರುವ ಪರಿಸ್ಥಿತಿಯಿದೆ. ಇಡೀ ಕರ್ನಾಟಕದಲ್ಲಿ ನೀರವಾರಿ ಸವಲತ್ತಿಲ್ಲ, ಇನ್ನೊಂದಿಲ್ಲ, ಮತ್ತೊಂದಿಲ್ಲವೆಂದು ಯಾವುದಾದರೂ ಜಿಲ್ಲೆ ಬಂದರೆ ಅದು ಬೀದರ್ ಜಿಲ್ಲೆಯೇ ಆಗಿರುತ್ತದೆ. ಅಂತಹ ಒಂದು ಜಿಲ್ಲೆಯಲ್ಲಿ ಸುಮಾರು *15*

ವರ್ಷಗಳ ಹಿಂದೆ 100–150 ಅಡಿ ಭೂಮಿಯನ್ನು ಕೊರೆಸಿದರೆ ನೀರು ಸಿಗುತ್ತಿತ್ತು. ಆದರೆ ಇವತ್ತು 300, 400, 500 ಅಡಿಗಳ ಆಳಕ್ಕೆ ಹೋದರೂ ನೀರು ಸಿಗುತ್ತಿಲ್ಲ. ಮೊನ್ನೆ ಒಂದು ಊರಲ್ಲಿ 700–800 ಅಡಿ ಬೋರ್ ಕೊರೆಸಿದ ನಂತರ ಎರಡು ಇಂಚು ನೀರು ಸಿಕ್ಕಿದೆ. ಇಂತಹ ಪರಿಸ್ಥಿತಿ ಇರುವಾಗ ಇವರು ಒಂದು ಕಡೆ ಕುಡಿಯುವ ನೀರಿಗೆ ಬೋರ್‌ವೆಲ್ ಕೊರೆಸುವುದಕ್ಕೆ ಹಣ ಕೊಡಬೇಕು. ಮತ್ತೊಂದು ಕಡೆ ಅಂತರ್‌ಜಲ ಮೇಲ್ಭಾಗಕ್ಕೆ ವಿವಿಧ ಯೋಜನೆಗಳನ್ನು ರೂಪಿಸಿಕೊಂಡು ಸಂಪೂರ್ಣ ಜಿಲ್ಲೆಯನ್ನು ನೀರಿನಿಂದ ಕಾಪಾಡುವ ಕೆಲಸವನ್ನು ಇವತ್ತು ಸರ್ಕಾರ ಮಾಡಬೇಕಾಗಿದೆ. ನಮ್ಮಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ನೀರು ಹೋಗಬೇಕು. ಅದೇನಾದರೂ ಹೆಚ್ಚು ಹೋದರೆ ಅದು ಆಂಧ್ರಪ್ರದೇಶಕ್ಕೆ ಹೋಗುತ್ತದೆ. ಕರ್ನಾಟಕದಲ್ಲಿ ಆ ನೀರು ಇರುವುದಿಲ್ಲ. Barrage ಗಳನ್ನು ಮಾಡಬೇಕು. ಊರಿನಲ್ಲಿ ಗೋಕಟ್ಟೆ ನಿರ್ಮಾಣ ಮಾಡಬೇಕು. ಬಂದರುಗಳನ್ನು ನಿರ್ಮಾಣ ಮಾಡಬೇಕು.

ಶ್ರೀ ಗೋವಿಂದ ಕಾರಜೋಳ:– ನಿರ್ಮಾಣ ಮಾಡಿದ್ದಾರೆ. ಐದೈದು ಕೋಟಿ ರೂಪಾಯಿಗಳನ್ನು ಒಂದೊಂದು ಮತಕ್ಷೇತ್ರಕ್ಕೆ ಬಿಡುಗಡೆ ಮಾಡಿದ್ದೇವೆ.

ಶ್ರೀ ಬಂಡೆಪ್ಪ ಕಾಶಂಪೂರ್:– ಎಲ್ಲಿ ಮಾಡಿದ್ದೀರಿ? ಈಗ ಶ್ರೀ ಗೋವಿಂದ ಕಾರಜೋಳ ರವರು ಒಂದೊಂದು ಮತಕ್ಷೇತ್ರಕ್ಕೆ ಐದೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದರು. ಎಷ್ಟು ಆಯಿತು? ಹೋದವರ್ಷ ನಾವು norms change ಮಾಡಿ ಸ್ವಲ್ಪ ಹಣವನ್ನು ಅದಕ್ಕೆ utilize ಮಾಡಿ ಒಳ್ಳೆಯ ರೀತಿಯಲ್ಲಿ ಯೋಜನೆಗಳನ್ನು ಮಾಡಿಯೆಂದು ಹೇಳಿದೆವು. ಕೇವಲ ಹೇಳುವುದಷ್ಟೇ ಅದರ ಬಗ್ಗೆ ಮಾನ್ಯ ಮಂತ್ರಿಗಳು ಚಿಂತೆ ಮಾಡುವುದಿಲ್ಲ. ಎಷ್ಟು ಬಜೆಟ್ ಅದರಲ್ಲಿ allocation ಕೊಟ್ಟಿದ್ದೇವೆ, ಅದು ಖರ್ಚಾಗಿದೆಯೇ ಎಂಬ ಬಗ್ಗೆ ಕೂಡ ಲೆಕ್ಕ ಇಟ್ಟಿಲ್ಲ. ನಿಮ್ಮ ನಿಮ್ಮಿಂದ transfer ಆಗಿ ಎಲ್ಲೆಲ್ಲಿ ಹೋಗಿದೆಯೆಂಬುದು ನಮಗೆ ಗೊತ್ತಾಗಿದೆ. ಇಂತಹ ಒಂದು ಸೀರಿಯಸ್ ವಿಷಯದ ಬಗ್ಗೆ ನಾವು

ಮಾತನಾಡುವಾಗ ಇವತ್ತು ಸರ್ಕಾರದ ಬದ್ಧತೆ ಏನಿದೆ? ಅದರ ಮೇಲೆ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ನಿಮ್ಮ ಪಕ್ಷದಲ್ಲಿ ಕೇವಲ ಜಗಳವೇ ಆಯಿತು. ಒಬ್ಬರೇ ಒಬ್ಬ ಜಿಲ್ಲಾ ಮಂತ್ರಿಗಳಿಲ್ಲ. ನಮ್ಮಲ್ಲಿ ಧ್ವಜಾರೋಹಣ ಮಾಡುವುದಕ್ಕೂ ಯಾರೂ ಇಲ್ಲ. ನಮ್ಮಲ್ಲಿ ಶ್ರೀ ರೇವೂ ನಾಯಕ್ ಬೆಳಮಗಿವರಿದ್ದರೂ ಅವರನ್ನು ತೆಗೆದುಬಿಟ್ಟಿದ್ದೀರಿ. ಅವರು ಒಳ್ಳೆಯ ರೀತಿಯಲ್ಲಿ ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದರು. ಮೊನ್ನೆ ಬೀದರ್‌ನಲ್ಲಿ ಡಿ.ಸಿ. ಯವರು ಧ್ವಜಾರೋಹಣ ಮಾಡಿದರು. ಕುಡಿಯುವ ನೀರಿಗೋಸ್ಕರ ಇವರು ತಕ್ಷಣ ಎರಡು ಕೋಟಿ ರೂಪಾಯಿಗಳನ್ನು ಇಡಿ. ಟಾಸ್ಕ್‌ಫೋರ್ಸ್ ಶಾಸಕರು ಯಾರು ನಮ್ಮ ಮಾತನ್ನು ಕೇಳಬೇಡಿ. ಹೋಗಲಿ ನಿಮ್ಮ ಅಧಿಕಾರಿಗಳು ಯಾವ್ಯಾವ ಹಳ್ಳಿಯಲ್ಲಿ ಯಾವ್ಯಾವ ರೀತಿ ಅವಶ್ಯಕತೆ ಇದೆಯೋ ಆ ರೀತಿಯಾಗಿ ತೆಗೆದುಕೊಂಡು ನೀವು ಕೆಲಸ ಮಾಡಿ. ನಮಗೆ ಅಷ್ಟು ಬೇಸರವಾಗಿದೆ. ನಾವು ತುಂಬಾ ಬೇಸರದಿಂದ ಈ ಮಾತನ್ನು ಹೇಳುತ್ತಿದ್ದೇವೆ.

ಶ್ರೀ ಮಾಲೀಕಯ್ಯ ಗುತ್ತೇದಾರ್:– ದಯವಿಟ್ಟು ಇದು wrong message ಹೋಗುತ್ತದೆ. ಶಾಸಕರಿಗೆ ಜನ ಬಂದು ಹೇಳಿರುತ್ತಾರೆ. ಸಮಸ್ಯೆ ಶಾಸಕರಿಗೆ ಗೊತ್ತಿರುತ್ತದೆ. ಅಧಿಕಾರಿಗಳು ಹಿಂದಿನ ಬಿಲ್‌ಗಳನ್ನು ಎತ್ತುವುದಕ್ಕೆ ಮಾಡಿರುತ್ತಾರೆ. ಆ ರೀತಿ ಆಗಬಾರದು. ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಸಮಿತಿಯಿದೆ. ಅವರಿಗೆ ಹೇಳಿ ಎರಡು ಕೋಟಿ ರೂಪಾಯಿಗಳು ಸಾಲುತ್ತಿಲ್ಲ. ಮೂರು ಕೋಟಿ ರೂಪಾಯಿಗಳನ್ನು ಕೊಟ್ಟರೆ ಮಾಡಿಯೆಂದು ಹೇಳಿ.

ಶ್ರೀ ಬಂಡೆಪ್ಪ ಕಾಶಂಪೂರ್:– ನನಗೂ ಅರ್ಥವಾಗುತ್ತದೆ. ನಾನು ಬೇಸರದಿಂದ ಹೇಳುತ್ತಿದ್ದೇನೆ. ಶಾಸಕರೇನಾದರೂ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆಂದು ಗೊತ್ತಾದರೆ ಅವರನ್ನು ತೆಗೆದು ಹೊರಗೆ ಹಾಕಿಯೆಂದು ಬೇಸರದಿಂದ ಹೇಳುತ್ತಿದ್ದೇನೆ.

ಶ್ರೀ ಗೋವಿಂದ ಕಾರಜೋಳ:– Public Accounts Committee (P.A.C) ಸಮಿತಿಯ ಅಧ್ಯಕ್ಷರಾದ ಶ್ರೀ ಟಿ.ಬಿ. ಜಯಚಂದ್ರರವರು ನನ್ನ

ಇಲಾಖೆಯ ಬಗ್ಗೆ ಏನು remark pass ಮಾಡಿದ್ದಾರೆಂದು ತರಿಸಿ ನೋಡಿ. ರಾಷ್ಟ್ರಪತಿಗಳು ಸೂರಜ್‌ಕುಂಡದಲ್ಲಿ ಕರ್ನಾಟಕದ ಕನ್ನಡ ಸಂಸ್ಕೃತಿ ಇಲಾಖೆ ಇಡೀ ದೇಶದಲ್ಲಿ ಅದ್ಭುತ ಕೆಲಸ ಮಾಡಿದೆ ಎಂದು ಸರ್ಕಾರವನ್ನು ಅಭಿನಂದಿಸಿದ್ದಾರೆ. ನೀವೊಮ್ಮೆ ತೆಗೆದು ನೋಡಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್:- ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ನೀವು ನಂ.1 ಬಂದಿದ್ದೀರಿ. ನಮಗೆ ಕುಡಿಯುವ ನೀರನ್ನು ಕೊಡಿ ಸಾಕು.

ಶ್ರೀ ಗೋವಿಂದ ಕಾರಜೋಳ:- ಆಯಿತು ಕೊಡೋಣ. ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ ರವರೆ ಕುರುಡರು, ಕುಂಟರು ಜೋಡಿಯಾದ ಹಾಗೆ ಎದ್ದು ಮಾತನಾಡಬೇಡಿ ಸುಮ್ಮನೆ ಕುಳಿತುಕೊಳ್ಳಿ. ಪಿ.ಎ.ಸಿ. ಸಮಿತಿಯ ಅಧ್ಯಕ್ಷರು ನಮ್ಮ ಇಲಾಖೆಯ ಬಗ್ಗೆ meeting ನಲ್ಲಿ ಏನು remark pass ಮಾಡಿದ್ದಾರೆಂದು ಹೇಳಲಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್:- ಮಾನ್ಯ ಅಧ್ಯಕ್ಷರೆ, ಒಂದು ಕಡೆ day-by-day ಬೋರ್‌ವೆಲ್‌ಗಳ water table ಕೆಳಗೆ ಹೋಗುವುದರಿಂದ ಸಂಪೂರ್ಣವಾಗಿ ಬೋರ್‌ವೆಲ್‌ಗಳು ಬತ್ತಿಹೋಗುತ್ತಿವೆ. ಮುಂದಿನ rain fall ಶುರು ಆಗುವುದಕ್ಕೆ ಮೊದಲು ಏಕೆಂದರೆ ಇವತ್ತು ನಮ್ಮ ಜವಾಬ್ದಾರಿಯಿದೆ. ಇನ್ನೊಂದು ತಿಂಗಳಲ್ಲಿ Code of Conduct ಬರುತ್ತದೆ. ನಾವು ನೀವೆಲ್ಲ ಜನರ ಮಧ್ಯದಲ್ಲಿ ಹೋಗಬೇಕು. ನಮ್ಮ ಪತ್ರಿಕೆಯ ಸ್ನೇಹಿತರು ಬೀದರ್‌ನಲ್ಲಿ ಒಂದು ಪ್ರಶ್ನೆಯನ್ನು ಕೇಳಿದರು. ನೀವು ಯಾವ ರೀತಿ plan ಮಾಡಿದ್ದೀರಿ. ನಿಮಗೆ ಸೀಮಿತವಾಗಿ ಆದರೆ ಆಯಿತು, ಹೋಗೋಣವೆಂದು ಲೆಕ್ಕ ಹಾಕಿದ್ದೀರಾ? ಅಥವಾ ಮುಂದೆ ಬರಗಾಲಕ್ಕೂ ಏನಾದರೂ ಯೋಜನೆ ಮಾಡಿದ್ದೀರಾ? ಎಂದು ಕೇಳಿದರು. ಅದಕ್ಕೆ ನಾನು ಬರಗಾಲದ ಬಗ್ಗೆ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹಾಗೂ ಎಲ್ಲಾ ಮಂತ್ರಿಗಳ ಗಮನಕ್ಕೆ ತರುತ್ತೇನೆಂಬ ರೀತಿಯಲ್ಲಿ ಮಾತನಾಡಿದೆ. ಇಂತಹ ಸೀರಿಯಸ್ ವಿಷಯದ ಕಡೆ ನಾವು ಗಮನಹರಿಸಬೇಕಾಗಿದೆ. ಎರಡನೆಯದಾಗಿ ನರೇಗಾ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳನ್ನು

ಕೇಳಬೇಕು. ತಾವು ತಿಂಗಳಿಗೊಮ್ಮೆ ಎರಡು ಬಾರಿ ಬೀದರ್‌ಗೆ ಬಂದು ಸಭೆ ಮಾಡಿದ್ದೀರಿ. ನೀವು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರೆಂದು ನಾವು ಮೆಚ್ಚಿಕೊಂಡಿದ್ದೇವೆ. ಆದರೆ ಬೀದರ್ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಜಿಡ್ಡು ಹಿಡಿದು ಕುಳಿತಿದ್ದಾರೆ. ಮೊನ್ನೆ ನಾನು review ಮಾಡಿದಾಗ ಸಮಸ್ತ ನರೇಗಾದಲ್ಲಿ not even 20% of expenditure, book ಆಗಿಲ್ಲ. ಇಂತಹ ಭೀಕರ ಬರಗಾಲದಲ್ಲಿ ಜನ ಪರದಾಡುತ್ತಿದ್ದಾರೆ. ಕೂಲಿ ಬೇಕು ಎನ್ನುತ್ತಿದ್ದಾರೆ. ಅಂತಹದರಲ್ಲಿ ನಿಮ್ಮ ಮಾತನ್ನು ಅಧಿಕಾರಿಗಳು ಕೇಳುತ್ತಿಲ್ಲವೆಂದರೆ ಅಧಿಕಾರಿಗಳನ್ನು ಸುಮ್ಮನೆ ಏಕೆ ಬಿಟ್ಟಿದ್ದೀರೆಂದು ಅರ್ಥವಾಗುತ್ತಿಲ್ಲ. ಕೇವಲ 20% ಕೆಲಸವಾಗಿಲ್ಲ. ಮಾನ್ಯ ಡಿ.ಕೆ. ಶಿವಕುಮಾರ್ ಅವರು ಹೇಳಿದ ರೀತಿಯಲ್ಲಿ 100 ದಿನಗಳು, 150 ದಿನಗಳಲ್ಲಿ... 100 ದಿನಗಳಲ್ಲಿ ನನ್ನ ಮತಕ್ಷೇತ್ರದಲ್ಲಿ 20% ಸಾಧನೆಯಾಗಿಲ್ಲ. ಅಂದರೆ ಅಲ್ಲಿ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಅರ್ಥವಾಗುತ್ತದೆ. ನಾವು ಕರೆಯುತ್ತೇವೆ ಅವರು ಬರುತ್ತಾರೆ, ಬಂದು ಹೌದು ಸಾರ್ ಅಲ್ಲಿ ಅಲ್ಲಿ ಕೆಲಸವಾಗಿಲ್ಲ, ಜನರು ಕೇಳಿಲ್ಲವೆಂದು ಹೇಳುತ್ತಾರೆ. ಮೀಟಿಂಗ್ ನಡೆದ ಮಾರನೇ ದಿವಸ ಬೆಳಿಗ್ಗೆ ಊರಿಗೆ ಹೋದೆ. ಈ ರೀತಿಯ ಸಿಸ್ಟಮ್ ನಡೆದರೆ ನಾವು ಜನಗಳಿಗೆ ಹೇಗೆ ನ್ಯಾಯ ಕೊಡುಸುವುದು? ತಾವು ಇದರ ಮೇಲೆ ಒಂದು ನಿರ್ದಿಷ್ಟವಾದ ಆದೇಶವನ್ನು ಇಂದೇ ಹೊರಡಿಸಿ. ಯಾವ ಜಿಲ್ಲೆಯ ಜಿಲ್ಲಾ ಪಂಚಾಯಿತಿಯಲ್ಲಿ ಕಡಿಮೆ ಪ್ರೋಗ್ರೆಸ್ ಆಗಿದೆ, ಅಲ್ಲಿರುವ ಅಧಿಕಾರಿಗಳನ್ನು ತಕ್ಷಣವೇ ಸಸ್ಪೆಂಡ್ ಮಾಡುತ್ತೇವೆಂದು ಹೇಳಿದರೆ ಪಿ.ಡಿ.ಓ. ಸಮೇತ ಎಲ್ಲರೂ ಸೀರಿಯಸ್ ಆಗುತ್ತಾರೆ. ಏಕೆ ಆ ರೀತಿ ಮಾಡಬಾರದು? ಕೆಲಸ ಮಾಡಬೇಕಲ್ಲವೇ? ಅದಕ್ಕೂ ಮೊದಲು ಅಲ್ಲಿ ದುಡ್ಡನ್ನು ಖರ್ಚೇ ಮಾಡಿಲ್ಲವಲ್ಲಾ? ಒಂದೊಂದು ಪಂಚಾಯಿತಿಯಲ್ಲಿ ಸುಮಾರು 70–80 ಲಕ್ಷ ರೂ.ಗಳ Action-plan ಅಪ್ರೂವಲ್ ಆಗಿದ್ದು, ಅದರಲ್ಲಿ ಕೇವಲ 8–9 ಲಕ್ಷ ರೂ.ಗಳು ಮಾತ್ರ ಖರ್ಚಾಗಿದೆ. ಹಾಗಾಗಿ ತಾವು ಕ್ರಮ ತೆಗೆದುಕೊಳ್ಳಿ ಏಕೆ ಬಿಡುತ್ತೀರಿ? ಮೂರನೇ ವಿಚಾರವಾಗಿ ಹೇಳುವುದಾದರೆ

ಸಂಬಂಧಪಟ್ಟ ಮಾನ್ಯ ಸಚಿವರು ಸದನದಲ್ಲೇ ಇದ್ದಾರೆ. ಅವರು ಮಾತನಾಡಿದರೆ ಮೂಕ ಜಾನುವಾರುಗಳ ಆಶೀರ್ವಾದದಿಂದ ಇಲ್ಲಿ ಬಂದು ಕುಳಿತ್ತಿದ್ದೇನೆಂದು ಹೇಳುತ್ತಾರೆ. ಆದರೆ ಆ ಮೂಕ ಜಾನುವಾರುಗಳಿಗೆ ಏನು ಮಾಡಬೇಕು? ಕಳೆದ ವರ್ಷ ಮಾನ್ಯ ಮುಖ್ಯಮಂತ್ರಿಗಳಾಗಿ ಶ್ರೀ ಸದಾನಂದಗೌಡರು ಅಧಿಕಾರದಲ್ಲಿದ್ದರು. ಅವರು ಬೀದರ್‌ಗೆ ಬಂದರು. ಅಲ್ಲಿ ಅವರು ಬರಗಾಲವನ್ನು ಸಮೀಕ್ಷೆ ಮಾಡಿ, ಪ್ರಗತಿ ಪರಿಶೀಲನೆ ಮಾಡಲಾಯಿತು. ಅಲ್ಲಿ ಅವರು ಬಂದಾಗ ನಾವೆಲ್ಲರೂ ಸೇರಿ ತಾವು ಮೇವನ್ನು ಕೆ.ಜಿ.ಗೆ 6 ರೂ.ಗಳಂತೆ ಕೊಡುತ್ತಿದ್ದೀರಿ. ಆದರೆ 6 ರೂ.ಗಳಿಗೆ ಯಾವ ರೈತರು ತೆಗೆದುಕೊಳ್ಳವುದಕ್ಕಾಗುವುದಿಲ್ಲವೆಂದು ಹೇಳಿ ಅದಕ್ಕೆ minimum 50% ಸಬ್ಸಿಡಿ ಕೊಡುವಂತೆ ಪ್ರೆಷರ್ ಮಾಡಿದೆವು. ಅವರ ಜೊತೆಯಲ್ಲಿ ಮಾನ್ಯ ಪಶುಸಂಗೋಪನಾ ಸಚಿವರಾದ ಶ್ರೀ ರೇವೂ ನಾಯಕ್ ಬೆಳಮಗಿ ಅವರು ಇದ್ದರು. ಮಾನ್ಯ ಮುಖ್ಯಮಂತ್ರಿಗಳು ತಕ್ಷಣವೇ ಇದರ ಮೇಲೆ 50% ಸಬ್ಸಿಡಿ ಕೊಡುತ್ತೇವೆಂದು ಹೇಳಿದರು. ನಾವೆಲ್ಲರೂ ತಾವು ಹೀಗೆ ಆದೇಶ ಮಾಡಿದರೆ ಆಗುವುದಿಲ್ಲ. ಲಿಖಿತ ಮೂಲಕ ಕಳುಹಿಸಿದರೆ ಅವರು ಒಪ್ಪಿಕೊಳ್ಳುತ್ತಾರೆಂದು ಹೇಳಿದೆವು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು I am the CM of Karnataka State, ನಾನು ಹೇಳುವುದೇ it is order ಎಂದು ಹೇಳಿದರು. ಆದರೆ till today ಅವರೇ ಮಂತ್ರಿಗಳಿದ್ದಾರೆ, ಅದಕ್ಕೆ ಸಂಬಂಧಿಸಿದ ಮಂತ್ರಿಗಳು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಮಂತ್ರಿಗಳಿದ್ದಾರೆ, ಇಲ್ಲಿಯವರೆಗೂ ಸಚಿವ ಸಂಪುಟದಲ್ಲಿ ಏಕೆ ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ಕೇಳಲಿಲ್ಲವೋ ಗೊತ್ತಿಲ್ಲ, ಆದರೆ ಇಲ್ಲಿಯವರೆಗೆ ಸಬ್ಸಿಡಿ ಕೊಟ್ಟಿಲ್ಲ. ಈ ರೀತಿ ಸರ್ಕಾರದಲ್ಲಿ ನಡೆದಿದ್ದರೆ, ನಾವು ಯಾರನ್ನು ಕೇಳಬೇಕು? ಆದರೆ ಮೂಕ ಜಾನುವಾರುಗಳ ಸೇವೆ ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ರೇವುನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನಾ ಸಚಿವರು):- ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಸರಿಯಾಗಿ ಹೇಳುವುದಾದರೆ ಬೆಳೆ ಚೆನ್ನಾಗಿದೆ. ಆದೆ ಮಳೆ ಕಡಿಮೆಯಾಗಿದೆ.

ಶ್ರೀ ಬಂಡೆಪ್ಪ ಕಾಶಂಪೂರ್:– ಸಬ್ಸಿಡಿ ಬಗ್ಗೆ ಹೇಳಬೇಕು.

ಶ್ರೀ ರೇವುನಾಯಕ್ ಬೆಳಮಗಿ:– ಸಬ್ಸಿಡಿ ಬಗ್ಗೆ ಹೇಳುವುದಾದರೆ ಸ್ಟಡಿ ಟೀಮ್‌ಗೆ ಕೇಂದ್ರ ಸರ್ಕಾರದವರು ಅನುಮತಿ ಕೊಡಬೇಕು. ಕೇಂದ್ರಕ್ಕೆ ಮನವರಿಕೆ ಮಾಡಿದರೂ ಸಹ ಅವರಿಂದ ಪರ್‌ಮಿಷನ್ ಬಂದಿರುವುದಿಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ್:– ಆದರೆ ಈ ಮಾತು ಹೇಳಬಹುದಿತ್ತಲ್ಲವೇ?

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):– ಮಾನ್ಯ ಅಧ್ಯಕ್ಷರೆ, records straight ಆಗಿರಲಿ, ಅವರು ಹೇಳಿದ ತಕ್ಷಣ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರ ಅಧ್ಯಯನ ಟೀಮಿಗೆ ಕೊಡುವ ಸಿ.ಆರ್.ಎಫ್. ಫಂಡ್ ಆಗಲಿ, ಹೆಚ್ಚಿನ ಬೇಡಿಕೆ ಎರಡನೇ ವಿಷಯ. ಆದರೆ ರಾಜ್ಯ ಸರ್ಕಾರ ಏನು ಮಾಡುತ್ತಿದೆ. No, No, please confuse ಮಾಡಬೇಡಿ. ಅನುಮತಿ ಬರಲಿಲ್ಲ, ಅದಕ್ಕೆ ನಾವು ಕೊಡಲಿಲ್ಲ ಎಂಬುದು ಪ್ರಶ್ನೆಯೇ ಅಲ್ಲ. ಇದು ರಾಜ್ಯ ಸರ್ಕಾರದ ಜವಾಬ್ದಾರಿ ಸ್ವಾಮಿ. You cannot just point out at Central Government like that. CRF norms ಇದ್ದು, ಅದರ ಪ್ರಕಾರ ರಿಲೀಸ್ ಮಾಡುತ್ತಾರೆ. ನೀವು ಕೇಳಿದ ಹಾಗೆ ರಿಲೀಸ್ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಬಂಡೆಪ್ಪ ಕಾಶಂಪೂರ್:– Next day paper ನಲ್ಲಿ main news. ನೀವಲ್ಲಾ ಸದಾನಂದಗೌಡರು ಮಾನ್ಯ ಮುಖ್ಯಮಂತ್ರಿಗಳಾಗಿದ್ದರು.

(ಗೊಂದಲ)

ಶ್ರೀ ರೇವುನಾಯಕ್ ಬೆಳಮಗಿ:– ಇಲ್ಲಿ ಸ್ವಲ್ಪ ಕೇಳಿ. ನಮ್ಮ ರಾಜ್ಯ ಸರ್ಕಾರದವರೇ...... ಪರಮಿಷನ್ ಕೊಡಬೇಕೆಂದು ಹೇಳಿದರು.

(ಗೊಂದಲ)

ಶ್ರೀ ಬಂಡೆಪ್ಪ ಕಾಶಂಪೂರ್:– ಸಿ.ಎಂ. ಪಕ್ಕದಲ್ಲಿ ನೀವೇ ಕುಳಿತಿದ್ದೀರಲ್ಲವೇ?

(ಗೊಂದಲ)

ಶ್ರೀ ರೇವುನಾಯಕ್ ಬೆಳಮಗಿ:- ಕೇಂದ್ರ ಸರ್ಕಾರದವರು ಪರಮಿಷನ್ ಕೊಟ್ಟಿಲ್ಲ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):- ಏತಕ್ಕೆ? ರಾಜ್ಯ ಸರ್ಕಾರದವರು free fodder ಕೊಡಬಹುದು, ಅದಕ್ಕೆ ಯಾರು ನಿರ್ಬಂಧ ಮಾಡುವ ಹಾಗಿಲ್ಲ. ಕೇಂದ್ರ ಸರ್ಕಾರ ಚಾರ್ಜ್ ಮಾಡಿ ಎಂದು ಹೇಳಿಲ್ಲ.

ಶ್ರೀ ರೇವುನಾಯಕ್ ಬೆಳಮಗಿ:- ಆದರೂ ಅವರು ಪರ್‌ಮಿಷನ್ ಕೊಡಬೇಕಾಗಿತ್ತು.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):- No, No, ಯಾವ ಪರ್‌ಮಿಷನ್, ಏನಿಲ್ಲ, ಯಾರು ಹೇಳಿದರು?

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ರಾಜ್ಯ ಸರ್ಕಾರ ದುಡ್ಡು ಕೊಡುವುದಿಲ್ಲ, ಕೇಂದ್ರ ಸರ್ಕಾರ ದುಡ್ಡು ಕೊಡುವುದರಲ್ಲಿ ಪರಮಿಷನ್ ಬೇರೆ ಕೊಡಬೇಕೇ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಕೇಂದ್ರ ಸರ್ಕಾರವು ಬರ ಬಂದಂತಹ ಸಂದರ್ಭದಲ್ಲಿ, ಪ್ರಕೃತಿ ವಿಕೋಪವಾದಂತಹ ಸಂದರ್ಭದಲ್ಲಿ, NCCF ನಲ್ಲಿ, CRF ನಲ್ಲಿ, ರಾಜ್ಯ ಸರ್ಕಾರಕ್ಕೆ ಹಣ ಕೊಡಬೇಕಾದುದು ಕೇಂದ್ರ ಸರ್ಕಾರಕ್ಕೂ ಜವಾಬ್ದಾರಿ ಇದೆ. ನಾವೇನೂ ದಾನ ಧರ್ಮಕ್ಕೆ ಕೇಳುವುದಿಲ್ಲ. ಪ್ರತಿ ವರ್ಷ 50-60 ಸಾವಿರ ಕೋಟಿ ರೂ.ಗಳ ಟ್ಯಾಕ್ಸ್ ಕೊಡುತ್ತೇವೆ.

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):- ಆ ರೀತಿಯಲ್ಲಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ:- ಮಾನ್ಯ ಮುಖ್ಯಮಂತ್ರಿಗಳು ಸಬ್ಸಿಡಿ ಕೊಡುತ್ತೇವೆಂದು ಹೇಳಿದರೂ ಸಹ ಏಕೆ ಕೊಟ್ಟಿಲ್ಲ ಎನ್ನುವುದನ್ನು ಮಾತ್ರ ಹೇಳಬೇಕು. ಅದನ್ನು ಬಿಟ್ಟು ದಾರಿ ತಪ್ಪಿಸುವ ಮಾತನ್ನು

ಆಡುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಏಕೆ implement ಆಗಿಲ್ಲ ಎನ್ನುವುದನ್ನು ಮಾತ್ರ ಹೇಳಿ.

ಶ್ರೀ ಬಂಡೆಪ್ಪ ಕಾಶಂಪೂರ್:– "ನಾನು ಮುಖ್ಯಮಂತ್ರಿ, My order is final". This is the word.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– CRF ನಲ್ಲಿ ದುಡ್ಡು ಬಿಡುಗಡೆ ಮಾಡಿಲ್ಲವೆಂದು ಮಾನ್ಯ ಕಾರಜೋಳ್ ಸಚಿವರು ಹೇಳುತ್ತಿದ್ದರು. ಈಗ ನಾನು ಹೇಳುತ್ತಿರುವ ಅಂಕಿಅಂಶಗಳು ಬಹುಶಃ ನಿಮ್ಮಲ್ಲಿದೆ ಎಂದು ನಾನು ಭಾವಿಸುತ್ತೇನೆ. ಈ ವರ್ಷ ನಿಮಗೆ ಬಿಡುಗಡೆಯಾಗಿರುವ ಹಣದ ಪ್ರಮಾಣ ಎಷ್ಟು ಎಂದು ಹೇಳುವುದಾದರೆ STRF ನಲ್ಲಿ ಮೊದಲನೆಯ ಹಾಗೂ ಎರಡನೇಯ ಕಂತುಗಳಾಗಿ ಬಿಡುಗಡೆಯಾಗಿರುವುದು 66.55 ಕೋಟಿ ರೂ.ಗಳು. NDRF ನಲ್ಲಿ ಆಗಿರುವುದು 70.23 ಕೋಟಿ ರೂ.ಗಳು. ಕಳೆದ ವರ್ಷ NDRF ನಲ್ಲಿ ರಿಲೀಸ್ ಆಗಿರುವುದು 282.35 ಕೋಟಿ ರೂ.ಗಳು. ಒಟ್ಟು ಬಿಡುಗಡೆಯಾಗಿರುವ ಮೊತ್ತ 485.68 ಕೋಟಿ ರೂ.ಗಳು. ರಾಜ್ಯ ಸರ್ಕಾರ 106.36 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರದ ನೆರವು ಬಂದಿದೆಯೇ, ರಾಜ್ಯ ಸರ್ಕಾರದಿಂದ ನೆರವು ಬಂದಿದೆಯೇ ಎಂಬುದನ್ನು ನೀವೇ ಹೇಳಿ. CRF ನ ಎರಡೂ installment ಗಳು ನಿಮಗೆ ಈಗಾಗಲೇ ಕೊಟ್ಟಿದೆ. Advance ನಲ್ಲಿಯೂ ಸಹ ಕೊಟ್ಟಿದ್ದಾರೆ. ಬೇರೆ ಬೇರೆ ಬಾಬ್ತುಗಳಿಂದ ನಿಮಗೆ 500 ಕೋಟಿ ರೂ.ಗಳಾಗಿದೆ. ಆದರೆ ನೀವು ಖರ್ಚು ಮಾಡಿರುವುದು 100 ಕೋಟಿ ರೂ.ಗಳು ಮಾತ್ರ. ಕುಡಿಯುವುದಕ್ಕೆ ನೀರಿಲ್ಲ. ನಾನು ಮಾತನಾಡುವ ಸಂದರ್ಭದಲ್ಲಿ ಅಂಕಿ ಅಂಶಗಳನ್ನು ಹೇಳುತ್ತೇನೆ. ನಿಜವಾಗಿಯೂ ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಕಳೆದ ವರ್ಷ fodder ಗಾಗಿ ಗೋಶಾಲೆಗಳನ್ನು ತೆರೆಯುವುದಕ್ಕೆ ಹೇಳಿದ್ದರು. ಹೀಗಾಗಿ ನಾನು 9 ಗೋಶಾಲೆಗಳನ್ನು ತೆರೆದೆ. ಸುಮಾರು 25,000 – 30,000 ದನಗಳನ್ನು 8–9 ತಿಂಗಳು ಸಾಕುವಂತಹ ಕೆಲಸ ಮಾಡಿದೆ. ಇನ್ನು ಅವರಿಗೆ 60 ಲಕ್ಷ

ರೂ.ಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ನೀರು ಕೊಡುವ ಸಲುವಾಗಿ ತೊಟ್ಟಿ ಕಟ್ಟಿಸಿದ್ದು, ಅದಕ್ಕೆ ವೆಚ್ಚವಾಗಿರುವ 6 ಲಕ್ಷ ರೂ.ಗಳನ್ನು ಇದುವರೆಗೆ ಬಿಡುಗಡೆ ಮಾಡಿಲ್ಲ. ಈ ಬಗ್ಗೆ ನಾನು ಕೇಳಿ ಕೇಳಿ ಸಾಕಾಗಿದೆ. ಗೋಶಾಲೆಗಳನ್ನು ಮಾಡಿಸುವಷ್ಟು ಶಕ್ತಿ ನಿಮಗಿದೆಯೇ? ಮನಸ್ಥಿತಿ ಇದೆಯೇ? ಏಕೆ ಮಾತನಾಡುತ್ತೀರಿ? ಅಂಕಿ ಅಂಶ ನಿಮ್ಮದೇ ಸರಿ, 500 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ನೀವು ಕೊಟ್ಟಿರುವುದು 100 ಕೋಟಿ ಮಾತ್ರ. ಈ ಬಗ್ಗೆ ಹೇಳಿ.

ಅಧ್ಯಕ್ಷರು:- ಮಾನ್ಯ ಸದಸ್ಯರಾದ ಶ್ರೀ ಬಂಡೆಪ್ಪ ಕಾಶಂಪೂರ್ ಅವರು ಇನ್ನೊಂದು ಗಂಭೀರವಾದ ಸಮಸ್ಯೆಯನ್ನು ಎತ್ತಿದ್ದಾರೆ. ನರೇಗಾದಿಂದ 20% ಹಣವನ್ನು ಮಾತ್ರ ಖರ್ಚು ಮಾಡುವುದಕ್ಕೆ ಸಾಧ್ಯವಾಗಿದೆಯೇಂದು ಹೇಳಿದ್ದಾರೆ. ಉಳಿದ 80% ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ. Drought ಸಂದರ್ಭದಲ್ಲಿ normsನ್ನು relax ಮಾಡುವುದಕ್ಕೆ ಆಗಲಿಲ್ಲವೇ? ಆ ರೀತಿಯ ಕ್ಲಿಷ್ಟಕರವಾದ ಸಮಸ್ಯೆ ಇದೆಯೇ? ಏಕೆಂದೆ ಹಣವಿದ್ದು ಸಹ ಖರ್ಚು ಮಾಡುವುದಕ್ಕೆ ಸಾಧ್ಯವಾಗದ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದವರು ಇಬ್ಬರೂ ಕುಳಿತು ಯೋಚನೆ ಮಾಡಬೇಕಲ್ಲವೇ? ಇದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿ.

ಶ್ರೀ ಟಿ.ಬಿ. ಜಯಚಂದ್ರ:- ಈ ವರ್ಷ ಮಹಾತ್ಮ ಗಾಂಧೀ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಭಾರತ ಸರ್ಕಾರವು indicate ಮಾಡಿರುವುದು 3,800 ಕೋಟಿ ರೂ.ಗಳು. ಅದರಲ್ಲಿ ಬರ ಬಂದ ಸಂದರ್ಭದಲ್ಲಿ 100 – 150 ದಿನಗಳಿಗೆ enhance ಮಾಡುವ ಕೆಲಸವನ್ನು ಮಾಡಿದೆ. ರಾಜ್ಯಪಾಲರ ಭಾಷಣದಲ್ಲಿ 1,000 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆಂದು ಇವರು ಬಹಳ ಚೆನ್ನಾಗಿ ಹೇಳಿದ್ದಾರೆ. 1,000 ಕೋಟಿ ರೂ.ಗಳು ಮುಗಿಯುವುದಕ್ಕೆ ಎರಡು ತಿಂಗಳು ಮಾತ್ರ ಇದೆ. Financial ಆಗಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆಂದರೆ, ಇದು ನಾಲ್ಕನೇ ವರ್ಷ ಜಾರಿಯಲ್ಲಿರುವುದು. ಮೊದಲನೆಯ ವರ್ಷ ಬಹಳ ಕಡಿಮೆಯಿತ್ತು. ಎರಡನೇ ವರ್ಷದಲ್ಲಿ 2,800 ಕೋಟಿ ರೂ.ಗಳವರೆಗೆ ಖರ್ಚು ಮಾಡಿದರು.

ಮೂರನೇ ವರ್ಷಕ್ಕೆ 2,600 ಕೋಟಿ ರೂ.ಗಳನ್ನು ಖರ್ಚು ಮಾಡಿದರು. ಈ ವರ್ಷ 1,000 ಕೋಟಿ. ನಿಮಗೆ ಅಲೋಕೇಷನ್ 100 – 150 ದಿವಸಗಳಾಗಿರುವುದರಿಂದ ಹೆಚ್ಚು ಹಣವಿದೆ, ಆದೆ ಹಣ ಏಕೆ ಖರ್ಚಾಗುತ್ತಿಲ್ಲ? ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ಇದರಲ್ಲಿ ಸ್ವಲ್ಪ transparency ಬಂದಿದೆ. Labour amount ಏನಿದೆ ಅದು ನೇರವಾಗಿ account ಗೆ adjust ಆಗುತ್ತಿದೆ. ಮೊದಲನೆಯದಾಗಿ ಇಲ್ಲಿ ಮಧ್ಯವರ್ತಿಗಳ ಪ್ರಶ್ನೆ ಇಲ್ಲ. ಎರಡನೆಯದಾಗಿ ಬಹುಶಃ ಇವತ್ತು ರಾಜ್ಯದಲ್ಲಿ ನೀವು ಲೆಕ್ಕ ಹಾಕಿಕೊಂಡರೆ ಸಾವಿರಾರು ಕ್ರಿಮಿನಲ್ cases against PDO's, Secretaries, Grama Panchayath Adhyaksha's ಇವೆ. ಏಕೆಂದರೆ Estimate sanction ಮಾಡುವವರು ಇವರೆ, Administrative approval ಕೊಡುವವರು ಇವರೇ, Action plan ಮಾಡುವವರು ಇವರೆ. ಹೀಗಾಗಿ entire machinery ಯಾರು ಒಬ್ಬರು ಕೂಡ ಕೆಲಸ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಇದು ವಾಸ್ತವಿಕವಾಗಿರುವ ವಿಚಾರ. ಇದಕ್ಕೆ ತಾವು ಒಂದು ಮಾತು ಹೇಳಿದ್ದೀರಿ. ಬರ ಇರುವ ಸಂದರ್ಭದಲ್ಲಿ ಇದಕ್ಕೆ ಅನುಗುಣವಾಗಿ ಮಾಡುವುದಕ್ಕೆ ಸಾಧ್ಯನಾ ಎಂದು ಪ್ರಶ್ನೆ ಬಂದಾಗ ನಾನು ಮಾನ್ಯ ಶರದ್ ಪವಾರ್ ಬಂದಾಗ ನಾನು ಅವರನ್ನು ಭೇಟಿ ಮಾಡಿ ಕೇಳಿದಾಗ ಹೇಳಿದರು ಇವತ್ತು ನಿಮ್ಮ ಸ್ಥಿತಿಗತಿಗಳು ಈ ರೀತಿ ಇವೆ. ಈ ರೀತಿ ಇರುವಂಥ ಯೋಜನೆಗಳನ್ನು ಮಾಡುವುದಕ್ಕೆ ಪ್ರಸ್ತಾಪ ಮಾಡಿದಾಗ ನಾವು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಇವತ್ತು ನೆರೆ ರಾಜ್ಯ ಆಂಧ್ರದಲ್ಲಿ specific ಆಗಿ region specific, difficulty specific problems ಅನ್ನು ತೆಗೆದುಕೊಂಡು ಬರುತ್ತಾರೆ. ನೀವು ಏನು ತರಲಿಲ್ಲವಲ್ಲ ಎಂದರು. ಇದನ್ನು ಕೂಡಾ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿದರೆ ಇವತ್ತು ಕೂಡ ಖರ್ಚು ಮಾಡುವುದಕ್ಕೆ ಸಾಧ್ಯ. ಇವತ್ತು ಬರದಿಂದ ತತ್ತರಿಸುವ ತಾಲ್ಲೂಕಿನಲ್ಲಿ ಉದ್ಯೋಗ ಇಲ್ಲದ ಜನ ಇದ್ದಾರೆ. 40 ರೂಪಾಯಿ, 50 ರೂಪಾಯಿ ಕೂಲಿ ಸಿಗದಂಥ ಜನರು

ಇರುವಂಥ ಈ ಸಂದರ್ಭದಲ್ಲಿ ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಅಂದರೆ ಆಡಳಿತ ಸಂಪೂರ್ಣವಾಗಿ ಇದಕ್ಕೆ ಸಹಕಾರ ಕೊಡುತ್ತಿಲ್ಲ.

ಅಧ್ಯಕ್ಷರು:– ಬಂಡೆಪ್ಪ ಕಾಶಂಪೂರ್ ಮಾತನಾಡಿ.

ಶ್ರೀ ಬಂಡೆಪ್ಪ ಕಾಶಂಪೂರ್ (ಬೀದರ್ ದಕ್ಷಿಣ):– ಕೇಂದ್ರ ಸರ್ಕಾರದ್ದು ಅಷ್ಟೇ ಜವಾಬ್ದಾರಿ ಇದೆ. ರಾಜ್ಯ ಸರ್ಕಾರದ್ದು ಅಷ್ಟೇ ಜವಾಬ್ದಾರಿ ಇದೆ. ಇಲ್ಲಿ ಪೇಪರ್ ಕಟಿಂಗ್ ಇದೆ. ಭೀಕರ ಬರ ರಾಜ್ಯಕ್ಕೆ ಕೇಂದ್ರ ಕೊಟ್ಟಿದ್ದು ಪರಿಹಾರ. ಇದನ್ನು ನಾನು ಬರೆದಿರುವುದಲ್ಲ. ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಬೇಕಾದರೆ ಅಧಿವೇಶನ ಮುಗಿದ ನಂತರ ಎಲ್ಲಾ ಪಕ್ಷದವರನ್ನು ಕರೆದುಕೊಂಡು ಕೇಂದ್ರಕ್ಕೆ ನಡೆಯಿರಿ. ಹೋದಸಲ 11 ಸಾವಿರ ಕೋಟಿ ಲಾಸ್ ಆಗಿದೆ ಎಂದು ಹೇಳಿದ್ದೀರಿ. ಹಾಗಾಗಿ ಈಗ ನಾನು ಹೇಳುವುದು ಏನೆಂದರೆ, ಒಂದು ರಾಜ್ಯ ಸರ್ಕಾರದ ಜವಾಬ್ದಾರಿಯುತ ಒಬ್ಬ ಮುಖ್ಯಮಂತ್ರಿಗಳು, ಅವರ ಪಕ್ಕ ಕುಳಿತಂಥ ಪಶೂಸಂಗೋಪನೆ ಸಚಿವರು ಈ ರೀತಿ ಹಾರಿಕೆ ಮಾತಾಡಿ ಹೋದರೆ ರಾಜ್ಯದ ಜನತೆ ಯಾರನ್ನು ನಂಬಬೇಕು. Next day head line ನಲ್ಲಿ ಮೇವಿಗೆ ಸಬ್ಸಿಡಿ ಎಂದು ಬರುತ್ತದೆ. ಇದುವರೆಗೆ ಕೊಟ್ಟಿಲ್ಲ. ಮೊನ್ನೆ ಕ್ಯಾಬಿನೆಟ್ ಮಾಡಿದರು. Next day paper ಪೂರ್ತಿ 10ಕ್ಕೆ ರೂ. 250 ಬೆಂಬಲ ಬೆಲೆ ಎಂದು ಬರುತ್ತದೆ. ಆಮೇಲೆ ತೊಗರಿಗೆ ರೂ. 650. ಸನ್ಮಾನ್ಯ ಉಮೇಶ್ ಕತ್ತಿ, ಸಚಿವರು ಇಲ್ಲೇ ಕುಳಿತುಕೊಂಡಿದ್ದಾರೆ. ಅವರು ಎದ್ದು ಹೇಳಲಿ ಇವತ್ತಿನ date ನಲ್ಲಿ ರೈತರಿಗೆ ಏನು ಪರಿಹಾರ ಸಿಗುತ್ತಿದೆ. ಏಕೆಂದರೆ, ಇವತ್ತು ಭತ್ತದ ಬೆಲೆ ಮಾರ್ಕೆಟ್‌ನಲ್ಲಿ ರೂ. 2000 per ಕ್ವಿಂಟಾಲ್ ಹೋಗುತ್ತಿದೆ. ನಿಮಗೆ ರೈತರ ಬಗ್ಗೆ ಬದ್ಧತೆ ಇದ್ದರೆ ಯಾವಾಗ season ನಲ್ಲಿ ಕಡಿಮೆ ಆಗಿತ್ತು, ಎಲ್ಲರೂ ಬಂದು ನಿಮ್ಮಲ್ಲಿ ಕೇಳುತ್ತಿದ್ದರು. ಅವತ್ತು ಹೆಚ್ಚಿಗೆ ಮಾಡಬಹುದಾಗಿತ್ತು. ಇವತ್ತು ನೀವು 250 ರೂಪಾಯಿ ಹಾಕಿದ್ದೀರಿ. Rs. 1500+250 ಎಷ್ಟಾಯಿತು ಬೆಂಬಲ ಬೆಲೆ? ರೂ. 1750. ಇವತ್ತು ಮಾರ್ಕೆಟ್‌ನಲ್ಲಿ ರೂ.

2000 ಇದೆ. ಇದರಿಂದ ಯಾರಿಗೆ help ಆಯಿತು? ಕ್ಯಾಬಿನೆಟ್‌ಗೆ ಏನಾದರೂ ಅರ್ಥವಿದೆಯೇ? ಮೊದಲನೆಯದಾಗಿ, ಇವತ್ತು ಮಂತ್ರಿಗಳು ಏಕೆ ಈ ರೀತಿಯ ನಿರ್ಣಯ ತೆಗೆದುಕೊಂಡಿದ್ದೀರಿ. ಎರಡನೆಯದು ತೊಗರಿಗೆ ರೂ. 650 ಎಂದು ಹೇಳಿದ್ದಾರೆ. ಶಾಸಕರು ಎಲ್ಲರೂ ಇಲ್ಲಿ ಇದ್ದಾರೆ. ತೊಗರಿ ಬೆಳೆಗಾರರು, ಎಲ್ಲಾ ರೈತರು ಗುಲ್ಬರ್ಗಾಕ್ಕೆ ಹೋಗಿ ಡಿ.ಸಿ. ಕಛೇರಿಗೆ ಮುತ್ತಿಗೆ ಹಾಕಿ ರೂ. 5000 ನಮಗೆ ಬೆಂಬಲ ಬೆಲೆ ಕೊಡಿ ಎಂದು ಕೇಳಿದರು. ಆಯಿತು ಎಂದು ಹಾರ್ರೈಕೆ. ರೂ. 3800 ಕೇಂದ್ರ ಸರ್ಕಾರದ ಬೆಂಬಲ ಬೆಲೆ ಇದೆ.

ಶ್ರೀ ಉಮೇಶ್ ವಿಶ್ವನಾಥ್ ಕತ್ತಿ, ಹುಕ್ಕೇರಿ (ಕೃಷಿ ಸಚಿವರು):- ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕದಲ್ಲಿ ಇದ್ದಂಥ ಸರ್ಕಾರ ಪ್ರತಿ ವರ್ಷನೂ ಸಹ ಭತ್ತ ಆಗಿರಬಹುದು, ತೊಗರಿ ಆಗಿರಬಹುದು, ಈರುಳ್ಳಿ ಆಗಿರಬಹುದು, ರೈತರು ಬೆಳೆಯತಕ್ಕಂಥ ಎಲ್ಲಾ ಬೆಳೆಗಳಿಗೆ ಹೆಚ್ಚಿನ ಬೆಲೆ ಕೊಟ್ಟು ಖರೀದಿ ಮಾಡಿರುವ ಸರ್ಕಾರ ಯಾವುದಾದರೂ ಇದ್ದರೆ ಅದು ನಮ್ಮ ಸರ್ಕಾರ ಎಂದು ಎದೆ ತಟ್ಟಿ ಹೇಳುವಂಥ ಕೆಲಸವನ್ನು ಮಾಡಿದ್ದೇವೆ. ಎರಡನೆಯದಾಗಿ, ಕೇಂದ್ರ ಸರ್ಕಾರ ಪ್ರತಿ ವರ್ಷ ಭತ್ತಕ್ಕೆ ರೂ. 1500 ಬೆಂಬಲ ಬೆಲೆ ಘೋಷಣೆ ಮಾಡಬೇಕೆಂದು ಹೇಳಿ ರಾಜ್ಯದಿಂದ recommendation ಕಳುಹಿಸಿದರೆ ಇದುವರೆಗೆ ರೂ. 1600 ಮೇಲೆ ಮಾಡುವುದಕ್ಕೆ ಆಗಿಲ್ಲ. ಹಾಗಾಗಿ ಕಳೆದ ವರ್ಷ, ಅದರ ಹಿಂದಿನ ವರ್ಷ ರೂ. 250 ಬೆಂಬಲ ಬೆಲೆ ಮೇಲೆ ಕೊಟ್ಟು ರಾಜ್ಯ ಸರ್ಕಾರ ಖರೀದಿ ಮಾಡಿದೆ. Procurement ಮಾಡಿದಂಥ ಉದಾಹರಣೆ ನಿಮ್ಮ ಮುಂದೆ ಇದೆ. ಅದೇ ರೀತಿ ಕಳೆದ ವರ್ಷ ತೊಗರಿ ಬೆಲೆ ರೂ. 3200 ಇದ್ದಾಗ ರೂ. 4,000 ಕ್ಕೆ ಖರೀದಿ ಮಾಡಿದಂಥ ಉದಾಹರಣೆ ತಮ್ಮ ಮುಂದೆ ಇದೆ. ಈ ವರ್ಷ ರೂ. 3800 ಬೆಂಬಲ ಬೆಲೆ ಇದ್ದಾಗ ರೂ. 650 ಹೆಚ್ಚಿಗೆ ಮಾಡಿ ರಙೂ. 4500 ಕ್ಕೆ ತೊಗರಿಯನ್ನು ಖರೀದಿ ಮಾಡಿದ್ದೇವೆ. ಕಳೆದ ನಾಲ್ಕು ವರ್ಷಗಳಲ್ಲಿ ಯಾವುದಾದರೂ ಸರ್ಕಾರ ರೈತರಿಗೆ ಸಹಾಯ

ಮಾಡಿರುವುದಾದರೆ ಅದು ಭಾರತೀಯ ಜನತಾ ಪಕ್ಷದ ಮಾನ್ಯ ಜಗದೀಶ್ ಶೆಟ್ಟರ್‌ರವರ ಸರ್ಕಾರ.

ಶ್ರೀ ಬಂಡೆಪ್ಪ ಕಾಶಂಪೂರ್:- ಧನ್ಯಹೋ. ಕೇಳಿ. ಮಾನ್ಯ ಅಧ್ಯಕ್ಷರೆ, ಇವರು ಬೆಂಬಲ ಬೆಲೆ ಘೋಷಣೆ ಮಾಡಿದ್ದು ಎಷ್ಟು ದಿವಸ ಮೊದಲು ಅಂದರೆ, ಕ್ಯಾಬಿನೆಟ್‌ನಲ್ಲಿ 5-6 ದಿವಸ ಮೊದಲು. ಅಲ್ಲಿ ತೊಗರಿ season ಇದೆಯೇ ಸ್ವಾಮಿ? Complete ಮುಗಿದು ಹೋಗಿದೆ. 85% ತೊಗರಿ ಮುಗಿದು ಹೋಗಿದೆ. ಇವತ್ತು ನೀವು ಮಾಡಿದ್ದೀರಿ. ಇದು ನೀವು ರೈತರ ಬಗ್ಗೆ ತೋರಿಸುವ ಕಾಳಜಿನಾ?

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ:- ನಾನು ಕೃಷಿ ಮಂತ್ರಿಯಾಗಿ, ಕೃಷಿಕನಾಗಿದ್ದು, ತೊಗರಿ ಬೆಳೆ ಯಾವಾಗ ಬರುತ್ತದೆಂದು ನಮಗೂ ಗೊತ್ತು.

ಶ್ರೀ ಬಂಡೆಪ್ಪ ಕಾಶಂಪೂರ್:- ಯಾವಾಗ ಬರುತ್ತದೆ ಹೇಳಿ.

ಶ್ರೀ ಉಮೇಶ್ ವಿ. ಕತ್ತಿ:- ಜನವರಿ 15ರಂದು ಪ್ರಾರಂಭವಾಗುತ್ತದೆ. ಮಾರ್ಕೆಟ್‌ಗೆ ತೊಗರಿ ಬರುವುದು ಜನವರಿ 15ರ ನಂತರ...

(ಗೊಂದಲ)

ಶ್ರೀ ಶಿವರಾಜ್ ಎಸ್. ತಂಗಡಗಿ:- ಮಾನ್ಯ ಅಧ್ಯಕ್ಷರೆ, ರೂ. 250 ಹೆಚ್ಚಿಗೆ ಮಾಡಿದ್ದು, ಆ ರೈತರಿಗೆ ಯಾರಿಗೂ ಲಾಭ ಆಗಿಲ್ಲ. ನಮ್ಮಲ್ಲಿ 75 ಕೆ.ಜಿ.ಗೆ ರೂ. 1750 ರಂತೆ ಮಾರಾಟ ಮಾಡುತ್ತಿದ್ದಾರೆ. ಇದು ರೂ. 2000 ಹೋಗುತ್ತಿದೆ. ರೂ. 250 ಮಾಡಿರುವುದಕ್ಕೆ ಯಾವುದೇ ಅರ್ಥವಿಲ್ಲ. ಇದರಿಂದ ಯಾವ ರೈತರಿಗೂ ಒಳ್ಳೆಯದು ಆಗುವುದಿಲ್ಲ. ಮಾಡುವ ಹಾಗಿದ್ದರೆ ರೂ. 2000, 2500 ಮಾಡಿ. ಎಲ್ಲೋ ಒಂದು ಕಡೆ ರೈತರಿಗೆ ಒಳ್ಳೆಯದು ಆಗುತ್ತದೆಯೇ, ಒಳ್ಳೆಯ ರೇಟ್ ಬರುವುದಕ್ಕೆ ಸಾಧ್ಯವಾಗುತ್ತಾ ಅದನ್ನು ಮಾಡಿ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ನಾಡಗೌಡರೆ, ಕುಳಿತುಕೊಳ್ಳಿ.

ಶ್ರೀ ಗೋವಿಂದ ಕಾರಜೋಳ:– ಮಾನ್ಯ ಉಪಾಧ್ಯಕ್ಷರೆ, ಬೆಂಬಲ ಬೆಲೆ ಅರ್ಥವೇನು? ಬೆಂಬಲ ಬೆಲೆಯನ್ನು ಯಾಥಕ್ಕಾಗಿ ಘೋಷಣೆ ಮಾಡುತ್ತೇವೆ. ಮಾರ್ಕೆಟ್‌ನಲ್ಲಿ ಕೇಂದ್ರ ಸರ್ಕಾರ ನಿಗದಿ ಮಾಡಿದ ಬೆಲೆಗಿಂತಲೂ ಕಡಿಮೆ ಮಾರಾಟವಾಗುತ್ತಿದ್ದರೆ ರೈತನಿಗೆ ಸಹಾಯ ಮಾಡುವ ಸಲುವಾಗಿ ಬೆಂಬಲ ಬೆಲೆ ಘೋಷಣೆ ಮಾಡಿ ಕೇಂದ್ರಗಳನ್ನು ತೆರೆದು ಖರೀದಿ ಮಾಡುತ್ತೇವೆ. ಇವತ್ತು ಮಾರ್ಕೆಟ್‌ನಲ್ಲಿ ರೂ. 2000 ಇದ್ದಾಗ ಇವರು ಕೇಳತಕ್ಕಂಥದ್ದು ಏನು ಅರ್ಥ?

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– ರೂ. 2000 ಕ್ವಿಂಟಲ್‌ಗೆ ಮಾರಿದಾಗ 2000 ಕ್ಕಿಂತಲೂ ಹೆಚ್ಚಿಗೆ ಮಾರಾಟವಾಯಿತು. ಕೇಂದ್ರ ತೆಗೆಯುವಂಥ ಪ್ರಶ್ನೆ ಬರುವುದಿಲ್ಲ. ಯಾವಾಗ ಬರುತ್ತದೆ ಎಂದರೆ ಕೇಂದ್ರ ಸರ್ಕಾರ ನಿಗದಿ ಮಾಡಿದ ಬೆಲೆಗಿಂತಲೂ ಕಡಿಮೆ ಮಾರುಕಟ್ಟೆಯಲ್ಲಿ ಮಾರಾಟ ಆದಾಗ ರೈತನ ಸಹಾಯಕ್ಕೆ ಸರ್ಕಾರ ಬರಬೇಕು. ಆ ನೀತಿಯನ್ನು ನೀವು ಮೊದಲು ತಿಳಿದುಕೊಳ್ಳಿ.

ಶ್ರೀ ಬಂಡೆಪ್ಪ ಕಾಶಂಪೂರ್:– ತಾವು ಹೇಳಿರುವುದನ್ನು ನಾವು complete ಒಪ್ಪುತ್ತೇವೆ. ಯಾವಾಗ ಬೆಲೆ ಕುಸಿಯುತ್ತದೆಯೋ ಆವಾಗ ಬೆಂಬಲ ಬೆಲೆಗೆ ಬರಬೇಕು, rate stabilize ಆಗಬೇಕು ಎನ್ನುವುದಕ್ಕೆ minimum support price ಅನ್ನು ಘೋಷಣೆ ಮಾಡಿರುವುದು. ಮೊನ್ನೆ ಕ್ಯಾಬಿನೆಟ್‌ನಲ್ಲಿ ರೂ. 250 ಘೋಷಣೆ ಮಾಡಿದ್ದೀರಲ್ಲ. ಏಕೆ ಮಾಡಿದ್ದೀರಿ? ಎಲ್ಲಿ ಕುಸಿದಿತ್ತು ಬೆಂಬಲ ಬೆಲೆ? ನಾವು ಇಲ್ಲಿ ವೆಲ್‌ನಲ್ಲಿ ನಿಂತುಕೊಂಡು ಕೊಡಿ ಕೊಡಿ ಎಂದು ಕೇಳಿದರೆ ರೂ. 150 ಕೊಡಲಿಲ್ಲ. ಅಲ್ಲಿ ಇಲ್ಲೇ ಇಲ್ಲ ನೀವು 250 ಕೊಡುತ್ತೀರಿ ಏನು? ಯಾರಿಗೆ ಕೊಡುತ್ತೀರಿ 250? ಮಾರ್ಕೆಟ್‌ನಲ್ಲಿ ರೂ. 1750ಕ್ಕೆ 75 ಕೆ.ಜಿ ಮಾರುತ್ತೀರಿ. ರೂ. 2000/– ಚಿಲ್ಲರೆ ಒಂದು ಕ್ವಿಂಟಾಲ್‌ಗೆ ಇದೆ. ನಾವು ಇಲ್ಲಿ ವೆಲ್‌ನಲ್ಲಿ strike ಮಾಡಿದರೆ ರೂ. 150/– announce ಮಾಡಲಿಲ್ಲ. ನೀವು ಕ್ಯಾಬಿನೆಟ್‌ನಲ್ಲಿ ಸುಮ್ಮ ಸುಮ್ಮನೆ ರೂ. 250/– ಮಾಡಿದ್ದೇವೆಂದು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ:– ಮಾನ್ಯ ನಾಡಗೌಡರೇ, ಈ ವರ್ಷ ಈ ಕಥೆಗಳನ್ನು ಹೇಳುತ್ತಿದ್ದೀರಿ. ಕಳೆದ ವರ್ಷ ಇದೇ ನಾಡಗೌಡರು, ರಾಯಚೂರು ಭಾಗದಲ್ಲಿ ಬರತಕ್ಕಂಥ ಎಲ್ಲಾ ಶಾಸಕರು ಬೆಂಬಲ ಬೆಲೆ ಘೋಷಣೆ ಮಾಡಿದ್ದೀರಿ ಎಂದು ಹೇಳಿದ್ದರು. ಈ ವರ್ಷ ನಾವು ಘೋಷಣೆ ಮಾಡಿದ್ದು ಕೇಂದ್ರ ಸರ್ಕಾರದಿಂದ ಕೇಳಿದಂಥ ಬೆಲೆ ಘೋಷಣೆಯಾಗದ ಕಾರಣ ನಾವು ಹೆಚ್ಚಿನ ಬೆಲೆಯನ್ನು ಹಾಕಿ ಘೋಷಣೆ ಮಾಡಿದ್ದೇವೆ. ಅದನ್ನು ಮಾಡಿರುವುದರಿಂದ ರೈತರಿಗೆ ಒಳ್ಳೆಯದು ಆಗಲಿ. ಯಾರಿಗೆ ತೊಂದರೆಯಿದೆ?

ಉಪಾಧ್ಯಕ್ಷರು:– ಕಾಶಂಪೂರ್‌ರವರೆ ತಾವು ಮುಂದುವರೆಸಿ.

ಶ್ರೀ ಶಿವರಾಜ್ ಎಸ್. ತಂಗಡಗಿ:– ನೀವು ಘೋಷಣೆ ಮಾಡಿದ್ದೀರಿ, ಆದರೆ atleast 75 ಕೆ.ಜೆ.ಗೆ ರೂ. 2000/– ಆಗುತ್ತದೆ. ಅಷ್ಟಾದರೂ ಇವತ್ತು ನಮ್ಮ ರೈತರು ತ್ರಾಸಿನಲ್ಲಿದ್ದಾರೆ. ಗೊಬ್ಬರದ ಬೆಲೆ ಜಾಸ್ತಿಯಾಗಿದೆ, ಎಣ್ಣೆ ರೇಟ್ ಜಾಸ್ತಿಯಾಗಿದೆ, ಅದಕ್ಕಾಗಿ ನೀವು ಇನ್ನೂ ಕನಿಷ್ಠ ಏನಿಲ್ಲವೆಂದರೂ ರೂ. 2250/– ಅಥವಾ ರೂ. 2500 ಮಾಡಿದರೆ ಇನ್ನೂ ಸ್ವಲ್ಪ ರೇಟ್ ಜಾಸ್ತಿಯಾಗುತ್ತಲಿತ್ತು, ಆಗ ರೈತರಿಗೆ ಎಲ್ಲೋ ಒಂದು ಕಡೆ ನಿಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯ ಬರುತ್ತಿತ್ತು. ಇವತ್ತು ರೈತರು ಬೆಳೆದಂಥ ಬೆಳೆಗೆ ಅನುಕೂಲವಾಗುತ್ತಿಲ್ಲ. ಅದಕ್ಕಾಗಿ ನೀವು ರೂ. 2500/– ಇಲ್ಲವೆಂದರೆ ರೂ. 2200/– ಆದರೂ ಮಾಡಿದರೆ ರೈತರಿಗೆ ಎಲ್ಲೋ ಒಂದು ಕಡೆ ಒಳ್ಳೆಯದಾಗುತ್ತದೆ. ಆಗ ನಾನು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ.

(ಗೊಂದಲ)

ಉಪಸಭಾಧ್ಯಕ್ಷರು:– ನಾಡಗೌಡರೇ, ಹೆಚ್ಚು ಚರ್ಚೆ ಬೇಡ, ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಸಭಾಧ್ಯಕ್ಷರೆ, ನಾನು ಕಾಶಂಪೂರ್‌ರವರಿಗೆ ತಮ್ಮ ಮೂಲಕ ಒಂದು ವಿನಂತಿಯನ್ನು

ಮಾಡುತ್ತೇನೆ. ನಾವಿಬ್ಬರೂ ಮಂತ್ರಿಮಂಡಲದಲ್ಲಿ ಸದಸ್ಯರಾಗಿದ್ದೆವು. ಅವರು ಕೃಷಿ ಇಲಾಖೆಯಲ್ಲಿದ್ದರು, ನಾನು ಆಹಾರ ಇಲಾಖೆಯಲ್ಲಿದ್ದೆನು. ಬೆಂಬಲ ಬೆಲೆ ಘೋಷಣೆ ಮಾಡಿದಾಗ ಅವರು ಎಷ್ಟು matching grant ಕೊಟ್ಟರು? ಅಂದರೆ ಕೇಂದ್ರ ಸರ್ಕಾರ ನಿಗದಿ ಮಾಡಿದ್ದರ ಮೇಲೆ ಎಷ್ಟು ಕೊಟ್ಟರು ಎನ್ನುವುದು ಹೇಳಿಬಿಡಲಿ ಸಾಕು.

ಶ್ರೀ ಬಂಡೆಪ್ಪ ಕಾಶೆಂಪೂರ್:– ಸನ್ಮಾನ್ಯ ಉಪಸಭಾಧ್ಯಕ್ಷರೆ, ಮಾನ್ಯ ಕಾರಜೋಳ್‌ರವರು ಹೇಳಿದಂತೆ ನಾನು ಕೃಷಿ ಸಚಿವನಾಗಿ 20 ತಿಂಗಳು ಕಾರ್ಯನಿರ್ವಹಿಸಿದ್ದೇನೆ. ಶ್ರೀ ಉಮೇಶ್ ಕತ್ತಿಯವರು ಈಗ ಕೇಳಬೇಕು, ಆಗ ಕೇಂದ್ರ ಸರ್ಕಾರದಿಂದ ತೊಗರಿಗೆ ರೂ. 1400/– ಗಳ ಬೆಂಬಲ ಬೆಲೆ ಇತ್ತು. ನಾವು ನಿಮ್ಮ ತರಹ ಕಾಯಲಿಲ್ಲ. ನೀವು ಈಗ ನಮ್ಮ ಒತ್ತಡದ ಮೇಲೆ ಬೆಂಬಲ ಬೆಲೆ ಘೋಷಣೆ ಮಾಡಿರುವುದು. ಇವತ್ತು ನಿಮಗೆ ಯಾರ ಒತ್ತಡ ಇದೆ? ರೈತರ ಪರವಾಗಿ ನೀವು ಏಕೆ ಮಾಡುತ್ತಿಲ್ಲ? ತೊಗರಿಗೆ ರೂ. 1850/– ಖರೀದಿ ಪ್ರಾರಂಭವಾಗಿದೆ. ಸ್ವಲ್ಪ ಸಮಾಧಾನದಿಂದ ಕೇಳಿ, ನಾನು ಹೇಳುವುದೇನೆಂದರೆ, ನೀವು ರೂ. 650/– ಗಳನ್ನು ಕೊಡಬೇಕೆಂದು 4 ದಿಸಗಳ ಮೊದಲು ಸಚಿವ ಸಂಪುಟದಲ್ಲಿ ನಿರ್ಣಯ ತೆಗೆದುಕೊಂಡಿದ್ದೀರಿ, ಇದನ್ನೇ ನೀವು 1 ತಿಂಗಳು ಅಥವಾ 2 ತಿಂಗಳು ಮೊದಲು ನಿರ್ಣಯ ಮಾಡಿದಿದ್ದರೆ, ಆ ರೈತರಿಗೆ ಸವಲತ್ತು ಆಗುತ್ತಿತ್ತು. ರೂ. 3200/– ರಿಂದ ರೂ. 3800/– ಇರಬಹುದು, maximum highest quality ಅಂದರೆ ರೂ. 4000/– ಕ್ಕಿಂತ ತೊಗರಿ ಬೆಲೆ ಮೇಲೆ ಹೋಗಿಲ್ಲ. ನೀವು ಯಾವ ಪುರುಷಾರ್ಥಕ್ಕೆ ಬೆಂಬಲ ಕೊಟ್ಟಿದ್ದೀರಿ ಸಾರ್? ಇವರಿಗೆ ನೇರ ಗೊತ್ತಾಗುತ್ತಿದೆ ಎಂದರೆ, ಇವತ್ತು ಈ ರಾಜ್ಯದ ರೈತರ ಪರವಾಗಿ ನಾನು ಕೇಳುತ್ತೇನೆ. APMC records ತೆಗೆದುಕೊಳ್ಳಿ, ರೂ. 650/–ಗಳ ಬೆಂಬಲ ಬೆಲೆಯನ್ನು ಅವರ ಮನೆ ಹತ್ತಿರ ಕಳುಹಿಸಿ, ನಾವೆಲ್ಲಾ ಆ ಭಾಗದಿಂದ ಬರುವವರು, ಇವತ್ತು already ತೊಗರಿ ಮುಗಿದುಹೋಗಿದೆ. Hardly 10% ಇಲ್ಲ. ನಾನು ಒಬ್ಬ ರೈತ ಎಂದು ಉಮೇಶ್ ಕತ್ತಿಯವರು ಹೇಳಿದರು. ಏನು ಸ್ವಾಮಿ, ನೀವೆಲ್ಲಾ standard

ರೈತರು, foreign system ಅಳವಡಿಸಿಕೊಂಡಿರುವವರು, ನೀವುಗಳು ಇಲ್ಲಿನ ರೈತರಲ್ಲ.

(ಗೊಂದಲ)

ಶ್ರೀ ಬಂಡೆಪ್ಪ ಕಾಶಂಪೂರ್:- ನಾನು ಹೇಳುವುದೇನೆಂದರೆ, ಆ ರೈತರಿಗೆ loss ಆಗಿದೆ. ಇವರು ಬೆಂಬಲ ಬೆಲೆಯನ್ನು ಏಕೆ ಈಗ announce ಮಾಡಿದ್ದಾರೆಂದರೆ, ಬೀದರ್, ಗುಲ್ಬರ್ಗಾ ಭಾಗದಲ್ಲಿ ಚುನಾವಣೆ ಸಮಯದಲ್ಲಿ ಹೋದರೆ ಇವರನ್ನು ಜನರು ಮಾತನಾಡಿಸುವುದಿಲ್ಲ. ಅದಕ್ಕೋಸ್ಕರ at least face saving ಗೋಸ್ಕರ ಇವರು ಕ್ಯಾಬಿನೆಟ್‌ನಲ್ಲಿ ತೋರಿಸಿ ಮಾಡಿದ್ದಾರೆಯೇ ವಿನಹ, ಇದು ರೈತರಿಗೆ ಅನುಕೂಲ ಮಾಡುವ ಉದ್ದೇಶದಿಂದಲ್ಲ. ಇವತ್ತು ನಿಜಕ್ಕೂ ನಮ್ಮ ಪಶುಸಂಗೋಪನೆ ಮಂತ್ರಿಗಳು ನಾಳೆ ನಾಡಿದ್ದರೊಳಗಾಗಿ ಮುಖ್ಯಮಂತ್ರಿಗಳ ಜೊತೆಯಲ್ಲಿ ಮುಂದಿನ ದಿನಗಳಲ್ಲಿ ನಾವು ಯಾವ ರೀತಿ fodder ಗೆ ಒಂದು ಪ್ಲಾನ್ ಮಾಡುತ್ತೇವೆ, ಆ ಸಿಸ್ಟಮ್‌ನಲ್ಲಿ with subsidy ಕಳುಹಿಸುತ್ತೇವೆ ಎಂಬ ನಿಟ್ಟಿನಲ್ಲಿ ಅವರು ಯೋಜನೆ ಮಾಡಬೇಕು. ಮತ್ತೊಂದು ಮೇಜರ್ ಆಗಿ Crop Insurance, Weather Insurance ಮಾಡಬೇಕು. ಪ್ರತಿ ತಾಲ್ಲೂಕಿಗೆ, ಪ್ರತಿ ಗ್ರಾಮ ಪಂಚಾಯಿತಿಗೆ teller-metric rain gauge system ಮಾಡುತ್ತೇವೆ ಎಂದು ಹೇಳಿದ್ದರು. ಇನ್ನೂ ತನಕ ಆಗಿಲ್ಲ. ಪ್ರತಿ ಬಜೆಟ್‌ನಲ್ಲಿ ನಮ್ಮ ಅವಧಿಯಿಂದಲೂ ಹೇಳುತ್ತಾ ಹೋಗಿದ್ದೇವೆ. ಅದಕ್ಕೆ ಎಲ್ಲೋ ಒಂದು ಕಡೆ ಆ ಬದ್ಧತೆಯನ್ನು ನೀವು ತೋರಿಸುತ್ತಿಲ್ಲ. ಏಕೆಂದರೆ, ಅದು ಒಳ್ಳೆಯ scheme. ಅಧ್ಯಕ್ಷರೆ, weather insurance ಮಳೆ ಆಧಾರದ ಮೇಲೆ ಇರುತ್ತದೆ. ಬೆಲೆ ಎಷ್ಟು ಆಗಿದೆ, ಎಷ್ಟು ಬಿಟ್ಟಿದೆ ಎನ್ನುವುದರ ಮೇಲೆ ಇರುವುದಿಲ್ಲ. ಈ ಭೀಕರ ಬರಗಾಲದ ಸಮಯದಲ್ಲಿ ಅಥವಾ ಪ್ರವಾಹ ಬಂದಲ್ಲಿ, ಆ insurance scheme very best. ಆ ಸಿಸ್ಟಮ್ ನಮ್ಮ ರೈತರಿಗೆ ಎಲ್ಲಿಯೂ ಪ್ರಯೋಜನವಾಗುತ್ತಿಲ್ಲ. ಅದರ ಮೇಲೆ ಗಂಭೀರವಾದ ಚಿಂತನೆ ಮಾಡಿ, ಮತ್ತೆ ಇಂಥ ಬರಗಾಲದಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ, ಆದರೆ ಆ ರೈತರಿಗೆ insurance ಟೈಮ್‌ಗೆ ತಲುಪುತ್ತಿಲ್ಲ. ಮತ್ತೊಂದು ಮುಖ್ಯವಾದ

ವಿಷಯ current. Electricity ಯಾವ ರೈತರಿಗೆ ಎಲ್ಲಿ ತಲುಪುತ್ತಿದೆ. 6 ತಾಸು ವಿದ್ಯುತ್ ಕೊಡುತ್ತಿದ್ದೇವೆ ಎಂದು ಹೇಳುತ್ತಾರೆ. ಆದರೆ ನಾಲ್ಕು, ನಾಲ್ಕೂವರೆ ತಾಸಿನಲ್ಲಿ ಕರೆಂಟ್ ಕಟ್ ಆಗುತ್ತದೆ. ಇದರಲ್ಲಿ ನೀವು ಯಾವುದೇ ಬದ್ಧತೆ ತೋರಿಸುತ್ತಿಲ್ಲ. ಎಲ್ಲೋ ಒಂದು ಕಡೆ ಈ ಸರ್ಕಾರ, ಸುಮಾರು 4–5 items ಗಳ ಬಗ್ಗೆ ಗಮನ ಹರಿಸಬೇಕು. ಮೊದಲನೆಯದಾಗಿ ಕುಡಿಯುವ ನೀರಿಗೆ ಕನಿಷ್ಠ ಒಂದು ಮತಕ್ಷೇತ್ರಕ್ಕೆ ಕೂಡಲೇ 3 ಕೋಟಿ ರೂಪಾಯಿಗಳನ್ನು ಈ ಅಧಿವೇಶನ ಮುಗಿಯುವುದರೊಳಗಾಗಿ ನೀವು ಕಳುಹಿಸಬೇಕು. ಎರಡನೆಯದಾಗಿ NREGA ಬಗ್ಗೆ ನಾವು ಎಷ್ಟೆಲ್ಲಾ ಚರ್ಚೆ ಮಾಡುತ್ತೇವೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಅವರಿಗೆ accountability ಮಾಡಿ ಏಕೆ ನೀವು ಖರ್ಚು ಮಾಡುತ್ತಿಲ್ಲವೆಂದು ಹೇಳಿ ಅದರ ಮೇಲೆ action ತೆಗೆದುಕೊಳ್ಳಬೇಕು. ಮೂರನೆಯದಾಗಿ, fodderಗೆ ಕೂಡಲೇ subsidy announce ಮಾಡಿ, ಅಲ್ಲೇ ಆ ಜಿಲ್ಲೆಗೆ ಒಂದು ಪ್ಲಾನ್ ಮಾಡಿ ಮುಂದಿನ ದಿನಗಳಲ್ಲಿ ಕೊಡಿಸಬೇಕು. ನಾಲ್ಕನೆಯದಾಗಿ, electricity shortage ಎಲ್ಲೆಲ್ಲಿದೆ, ಅಲ್ಲಿ immediate ಕೆಲವು ಪಂಚಾಯಿತಿಗಳಲ್ಲಿ ಅವರ fund, ನಿಮ್ಮ fund ಅಥವಾ ಯಾವುದಾದರೂ fund ನಲ್ಲಿ ಕೆಲವು emergency generators ಖರೀದಿಸುವ ಕೆಲಸ ಮಾಡಬೇಕು. ಮತ್ತೊಂದು ಇವತ್ತು insurance ಬಗ್ಗೆ ಹೇಳಿದ್ದೇನೆ. ಎಲ್ಲದ್ದಕ್ಕಿಂತ ಮುಖ್ಯವಾದುದು, ಶ್ರೀ ಕಾರಜೋಳ್‌ರವರು ಇಲ್ಲೇ ಇದ್ದಾರೆ, water conservation, ನೀರು ಹಿಂಗಿಸುವಂಥ ಕೆಲಸವನ್ನು ಏನು ಮಾಡುತ್ತಿದ್ದೇವೆ, ಅದಕ್ಕೆ minimum ಒಂದೊಂದು constituency ಗೆ ರೂ. 10 ಕೋಟಿಗಳನ್ನು, ನೀವು NREGA ದಲ್ಲಿ ಅಥವಾ ಯಾವ ಯೋಜನೆಯಲ್ಲಿ ಯಾದರೂ ಕೆಲಸ ಮಾಡಿ.

ಶ್ರೀ ಉಮೇಶ್ ವಿ. ಕತ್ತಿ:– ಜಲಾನಯನದಲ್ಲಿ ಮಾಡುತ್ತಿದ್ದೇವಲ್ಲ?

ಶ್ರೀ ಬಂಡೆಪ್ಪ ಕಾಶಂಪೂರ್:– ಈಗ ಜಲಾನಯನ ಎಲ್ಲಿದೆ? ಆಗ watershed, ಸುಜಲಾ ಯೋಜನೆ ಎಲ್ಲಾ ಇತ್ತು, ನಮ್ಮಲ್ಲಿ ಈ ಯೋಜನೆ ಇದೆ ಸ್ವಾಮಿ, ನಾನು ನೋಡುತ್ತಿದ್ದೇನೆ. ಅದು ಯಾವ ರೀತಿಯಿಂದಲೂ

ಕೆಲಸ ಆಗುತ್ತಿಲ್ಲ. ಅದಕ್ಕಾಗಿ ಅಧ್ಯಕ್ಷರೆ, ಎಷ್ಟೆಲ್ಲವನ್ನೂ ಸರ್ಕಾರ ತೀವ್ರಗತಿಯಲ್ಲಿ ಮಾಡಬೇಕು. ಏಕೆಂದರೆ ಮತ್ತೆ ಜನ ಇವರನ್ನು ಕ್ಷಮಿಸುವುದಿಲ್ಲ. ಈಗ ಕೊನೆ ಗಳಿಗೆಯಿದ್ದು last days ಎಣಿಸುತ್ತಿದ್ದಾರೆ. ಈ ಕೊನೆ ಗಳಿಗೆಯಲ್ಲಾದರೂ ದಯವಿಟ್ಟು ಈ ಸರ್ಕಾರ ಎಚ್ಚೆತ್ತುಕೊಂಡು ಜನರ ಪರವಾಗಿ ಈ ಎಲ್ಲಾ ಘೋಷಣೆಯನ್ನು ಈ ಅಧಿವೇಶನದಲ್ಲಿ ಮಾಡಬೇಕೆಂದು ನಾನು ಅವರ ಹತ್ತಿರ ವಿನಂತಿ ಮಾಡಿಕೊಳ್ಳುತ್ತಾ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.

ಉಪಸಭಾಧ್ಯಕ್ಷರು:– ಈಗ ಸದನವನ್ನು ನಾಳೆ 11 ಗಂಟೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 5 ಗಂಟೆ 37 ನಿಮಿಷಕ್ಕೆ ಮುಕ್ತಾಯಗೊಂಡಿತು)

(ಪುನಃ ಸದನವು ದಿನಾಂಕ: 06ನೇ ಫೆಬ್ರವರಿ 2013ರಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)